Swastika
Consultancy Services
A CUT ABOVE THE REST
Land Documentation | Human Resources | Corporate Training
MANGALORE | BANTWAL | MOODABIDRI

# SWASTIKA NEWSLETTER

ISSUE - 4 | VOLUME - 1 | OCTOBER - DECEMBER 2018
PRIVATE CIRCULATION ONLY

**VISION : TO BE THE FOREMOST SERVICE PROVIDER WITH REQUISITE SOLUTIONS**

*Book Post*

**To,**

## ಶಾಸಕರಾದ ವೇದವ್ಯಾಸ ಕಾಮತ್‌ರಿಂದ "ಸ್ವಸ್ತಿಕಾ ನ್ಯೂಸ್ ಲೆಟರ್" ತ್ರೈಮಾಸಿಕ ಪತ್ರಿಕೆ ಬಿಡುಗಡೆ

ದಿನಾಂಕ 25–07–2018ರಂದು ಮಾನ್ಯ ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾದ ವೇದವ್ಯಾಸ ಕಾಮತ್‌ರವರು ಮಂಗಳೂರು, ಬಿ.ಸಿ.ರೋಡ್‌ನಲ್ಲಿ ಹಾಗೂ ಮೂಡಬಿದ್ರೆಯಲ್ಲಿ ಕಚೇರಿ ಹೊಂದಿರುವ ಸ್ವಸ್ತಿಕಾ ಕನ್ಸಲ್ಟೆನ್ಸಿ ಸರ್ವಿಸಸ್ ಸಂಸ್ಥೆಯ **ಸ್ವಸ್ತಿಕಾ ನ್ಯೂಸ್ ಲೆಟರ್** ತ್ರೈಮಾಸಿಕ ಪತ್ರಿಕೆಯ ಮೂರನೇ ಆವೃತ್ತಿಯನ್ನು ಬಿಡುಗಡೆಗೊಳಿಸಿ, ಜನಸಾಮಾನ್ಯರಿಗೆ ಭೂ ದಾಖಲೆಗಳ ಬಗ್ಗೆ ಉತ್ತಮ ಮಾಹಿತಿಯನ್ನು ನೀಡಲು ಅವಶ್ಯಕವೆಂದು ಪತ್ರಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಶುಭ ಹಾರೈಸಿದರು. ಈ ಸರಳ ಸಮಾರಂಭದಲ್ಲಿ ಸಂಸ್ಥೆಯ ಪಿ.ವಿಶ್ವೇಶ್ವರ ಭಟ್, ಹರಿಕೃಷ್ಣ ಅಡಿಗ, ಅನನ್ಯ ಜೋಷಿ ಮತ್ತು ನಿವೃತ್ತ ಉಪತಹಶೀಲ್ದಾರ್ ಹಾಗೂ ಸಂಸ್ಥೆಯ ಕಂದಾಯ ಸಲಹೆಗಾರರಾದ ಶ್ರೀ ಪರಮೇಶ್ವರ ಮೊಯಿಲಿ, ಹಾಗೂ ಪದ್ಮನಾಭ ಎಮ್‌ರವರು ಉಪಸ್ಥಿತರಿದ್ದರು.



**ಸ್ವಸಿಕ್ತಾ ನ್ಯೂಸ್‌ಲೆಟರ್‌ನ ಸಂಪಾದಕ ಮಂಡಳಿ :**

**ಗೌರವ ಸಂಪಾದಕರು** : ಶ್ರೀ ಪಿ. ವಿ. ಭಟ್
**ಸಂಪಾದಕರು** : ಶ್ರೀ ಪರಮೇಶ್ವರ ಮೊಯಿಲಿ
ಶ್ರೀ ಪದ್ಮನಾಭ ಎಂ.
**ಉಪಸಂಪಾದಕರು** : ಶ್ರೀ ಬಿ. ಗಂಗಾಧರ ಹೆಗ್ಡೆ
**ಸಲಹೆಗಾರರು** : ಜೇಸಿ ಅಶ್ವಿನಿ ಅನುಶ್
ಶ್ರೀ ಹರೀಶ್ ಮಾಂಬಾಡಿ
ಶ್ರೀ ರಾಜಾ ಬಂಟ್ವಾಳ
**ಪತ್ರಿಕಾ ನಿರ್ವಹಣೆ** : ಶ್ರೀ ಹರಿಕೃಷ್ಣ ಅಡಿಗ
**ವಿಷಯ ಸಂಗ್ರಹಣೆ** : ವಿದ್ಯಾಲಕ್ಷ್ಮೀ, ರಶ್ಮಿತಾ, ಅಶ್ವಿತಾ

### TEAM SWASTHIKA

**Hari Krishna Adiga** B.Com
Manager
**Ashwitha** M.S.W.
Deputy Manager (Training and Liaison)
**Dhananjaya,** B.A.
Executive (Liaison)
**Parameshwara Moily** B.Com
Rtd. Deputy Tashildar, GOK
Revenue Advisor
**Gangadhara Hegde**
Rtd. Deputy Tashildar, GOK
Revenue Advisor
**Padmanabha M.** B.A.
Rtd. Deputy Tashildar, GOK
Revenue Advisor
**Krishna Moolya**
Rtd. Survey Supervisor GOK
Survey Consultant
**Vidyalakshmi** B.Com
Documentation Staff
**Rashmitha** B.Com
Documentation Staff
**Sunil Kumar**
Survey & Documentation Staff
**Mrs. Nayana** MSW
Client Relationship Officer

## Our Consulting Services :

### REVENUE DOCUMENTATION :

- Survey and boundary identification
- Land record identification
- Certified document copies from various government departments
- RTC mutations
- RRT work
- Filing appeals before DDLR court for FMB corrections
- Applying for 11 E sketches
- Land Conversion
- Khatha mutation and copy
- Registration of land, agreements & Row.
- Land Partition sketch
- Property card
- Zonal certificate
- Zonal Change
- Layout approvals
- Building licence and occupancy certificate
- Land development models (land optimization)
- Master plans and development plans
- Birth and death certificates
- Land acquisition payments
- Total station survey
- Suggestions to settle land disputes amicably
- Procuring NOC's

### SOFT SKILL & CORPORATE TRAINING


## ದ.ಕ. ಜಿಲ್ಲೆಯಲ್ಲಿ ಕುಮ್ಕಿ ಜಮೀನುಗಳಲ್ಲಿ ವರ್ಗದಾರರಿಗೆ ಇರುವ ವಿಶೇಷ ಸೌಲಭ್ಯಗಳು

1799ರಲ್ಲಿ ಟಿಪ್ಪು ಸುಲ್ತಾನನನ್ನು ಮೈಸೂರು ಯುದ್ಧದಲ್ಲಿ ಸೋಲಿಸಿದ ನಂತರ ಈಷ್ಟ್ ಇಂಡಿಯಾ ಕಂಪನಿಯವರು ಕೆನರಾ ಪ್ರದೇಶದ ಸಾಮಾಜಿಕ ಜೀವನ, ಆರ್ಥಿಕ ಪರಿಸ್ಥಿತಿ, ಕಂದಾಯ ಪದ್ಧತಿಗಳನ್ನು ಅಭ್ಯಸಿಸಿ, ಈಗಾಗಲೇ ಕಂಪನಿ ಆಡಳಿತದಲ್ಲಿದ್ದ ಕರ್ನೂಲು, ವಿಶಾಖಪಟ್ಟಣ, ಕೃಷ್ಣಾ, ಸೇಲಂಗಳಿಗಿಂತ ಈ ಪ್ರದೇಶ ಭಿನ್ನವಾಗಿರುವುದರಿಂದ 1862ರಲ್ಲಿ ಸೌತ್ ಕೆನರಾವನ್ನು ಮದ್ರಾಸು ಪ್ರಾಂತ್ಯದಲ್ಲಿ ಉಳಿಸಿಕೊಂಡು 1956ರವರೆಗೆ ಒಬ್ಬ ಕೆಲೆಕ್ಟರರ ಆಡಳಿತಕ್ಕೆ ಒಳಪಡಿಸಿ ಮದ್ರಾಸು ಪ್ರಾಂತ್ಯದ ಕಾನೂನಿನಂತೆ ಆಡಳಿತಕ್ಕೆ ಒಳಪಡಿಸಿತ್ತು.

1276ನೇ ಫಸ್ಲಿ (ಜುಲೈ 1ರಿಂದ ಪ್ರಾರಂಭವಾಗುವ ಫಸಲು ವರ್ಷ) ಅಂದರೆ 1867 ಇಸವಿಯ ಪೂರ್ವದಲ್ಲಿ ಹೊಂದಿದ ತೀರ್ವೆ ಹೊರಿಸಿದ ಖಾಸಗಿ ಭೂಮಿಗಳನ್ನು ಕದಿಂ ವರ್ಗ ಮತ್ತು ಆ ನಂತರದ ವರ್ಷಗಳಲ್ಲಿ ನೀಡಿದ ಜಮೀನುಗಳನ್ನು "ಹೊಸ ವರ್ಗ" ಎಂದು ಕರೆಯಲಾಗುತ್ತದೆ. ಇದು ಸೆಟ್ಲ್‌ಮೆಂಟ್‌ನ ಅಡಂಗಲ್ಲು, ಚಿಟ್ಟಾ, ರಿಜಿಸ್ಟರ್‌ಗಳಲ್ಲಿ ದಾಖಲೆ ಇರುತ್ತದೆ. ಕದಿಂ ಎಂಬುದು ಪುರಾತನ ಮೈಸೂರು ಹಿಂದುಸ್ಥಾನಿ ಶಬ್ದವಾಗಿರುತ್ತದೆ.

ಮುಂದುವರೆಯುವುದು ಪುಟ 3

### Monthly review meeting of Swastika Consultancy Team



### ಪುಟ ಸೂಚ್ಯಂಕ

ಸಾಮಾಜಿಕ ಭದ್ರತಾ ಯೋಜನೆ ವಿವರಗಳು – 2
ದ.ಕ ಜಿಲ್ಲೆಯಲ್ಲಿ ಕುಮ್ಕಿ ಜಮೀನುಗಳಲ್ಲಿ ವರ್ಗದಾರರಿಗೆ ಇರುವ ಸೌಲಭ್ಯಗಳು – 3
ಭೂ ದಾಖಲೆಯ ಬೆನ್ನೆಲುಬಾದ ಪಹಣಿ ಪತ್ರಿಕೆ – 4
ಮಂಗಳೂರು ನಗರದಲ್ಲಿ ಪ್ರೋಪರ್ಟಿ ಕಾರ್ಡ್ ಪಡೆಯಲು ನೀಡಬೇಕಾದ ದಾಖಲೆಗಳು – 4
11ಇ ನಕ್ಷೆಯ ಅವಶ್ಯಕತೆ ಮತ್ತು ಪಡೆಯುವ ವಿಧಾನಗಳು – 5
Health in Handwriting – 6
ಸ್ವಸ್ತಿಕಾ ಬಗ್ಗೆ ಅನಿಸಿಕೆಗಳು – 7
ತರಬೇತಿ ಚಿತ್ರಗಳು – 8



**ಶ್ರೀ ಪರಮೇಶ್ವರ ಮೊಯ್ಲಿ**
ನಿವೃತ್ತ ಉಪತಹಶೀಲ್ದಾರರು
ಕಂದಾಯ ಸಲಹೆಗಾರರು
ಸ್ವಸ್ತಿಕಾ ಕನ್ಸಲ್ಟೆನ್ಸಿ ಸರ್ವಿಸಸ್

ಕರ್ನಾಟಕ ಸರಕಾರವು ಕಂದಾಯ ಇಲಾಖೆಯ ಮೂಲಕ ಬಡತನ ರೇಖೆಗಿಂತ ಕೆಳಗಿನ ಕುಟುಂಬದ ಸಾಮಾಜಿಕ ಭದ್ರತೆಗಾಗಿ ವಿವಿಧ ಜನಪರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಸಮಾಜದ ವಿವಿಧ ರೀತಿಯ ದುರ್ಬಲ ವರ್ಗದವರನ್ನು ಗುರುತಿಸಿ ಬೇರೆ ಬೇರೆ ಮಾಸಿಕ ವೇತನವನ್ನು ಪಾವತಿಸಲು ಈ ಕೆಳಗಿನ ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಗಳನ್ನು ಸಮರ್ಪಕವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಒಂದು ಗುರುತರವಾದ ಜವಾಬ್ದಾರಿ ಕಂದಾಯ ಇಲಾಖೆಯ ಕಂದಾಯ ನಿರೀಕ್ಷಕರ ಮೇಲಿದೆ. ಕಂದಾಯ ನಿರೀಕ್ಷಕರು ಪ್ರತೀ ಯೋಜನೆಯಡಿಯಲ್ಲಿ ಸ್ವೀಕರಿಸಿದ ಅರ್ಜಿಗಳು ನಿಗದಿಪಡಿಸಿದ ನಮೂನೆಯಲ್ಲಿ ಸಲ್ಲಿಸಿರುವ ಬಗ್ಗೆ ಅರ್ಜಿ ಪರಿಶೀಲನೆ, ಸ್ಥಳ ತನಿಖೆ, ಅರ್ಜಿದಾರರ ಹೇಳಿಕೆ, ಪಂಚನಾಮೆ, ಪ್ರತಿಜ್ಞಾ ಪತ್ರ, ಇತರೇ ಪ್ರಮಾಣಪತ್ರ ಮುಂತಾದ ವಿವರಗಳೊಂದಿಗೆ ಸ್ಪಷ್ಟವಾದ ವರದಿ ಸಲ್ಲಿಸುವುದು ಅತೀ ಮುಖ್ಯ. ಸರಕಾರವು ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳ ವಿವರ ಈ ಕೆಳಗಿನಂತಿದೆ.

**1. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆ: (ದಿನಾಂಕ 19-11-2007ರಿಂದ ಜಾರಿ)**

**ಅರ್ಹತೆ:**

ಅ) ವಯಸ್ಸಿನ ಮಿತಿ – 60 ವರ್ಷ ಹಾಗೂ ಮೇಲ್ಪಟ್ಟು.
ಆ) ಬಿ.ಪಿ.ಎಲ್. ಕುಟುಂಬದವರಾಗಿರಬೇಕು.
ಇ) ಗಂಡು ಮಕ್ಕಳು ಇದ್ದರೂ ಅವರು ಫಲಾನುಭವಿಗಳನ್ನು ಪೋಷಿಸದೆ ಇದ್ದಲ್ಲಿ.
ಈ) ದುಡಿಯಲು ಅಸಮರ್ಥರಾಗಿರಬೇಕು
ಉ) ವಯಸ್ಸಿನ ಬಗ್ಗೆ ಚುನಾವಣಾ ಗುರುತಿನ ಚೀಟಿ.
ಜನನ ಪ್ರಮಾಣ ಪತ್ರ ಅಥವಾ ವೈದ್ಯಕೀಯ ದೃಢೀಕರಣ ಪತ್ರ ಹಾಜರುಪಡಿಸುವುದು.
ಊ) 60-79 ವರ್ಷ ಪಿಂಚಣಿ ಮೊತ್ತ ರೂ. 600/- ಮಾಸಿಕ
ಇ) 80 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮಾಸಿಕ ರೂ. 750/-
ಈ೦ ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

**2. ನಿರ್ಗತಿಕ ವಿಧವಾ ವೇತನ: (01-04-1984ರಿಂದ ಜಾರಿ)**

**ಅರ್ಹತೆ:**

ಅ) 18 ವರ್ಷಕ್ಕಿಂತ ಮೇಲ್ಪಟ್ಟು 64 ವರ್ಷದೊಳಗಿನ ವಿಧವೆಯರಾಗಿರಬೇಕು.
ಆ) ಕುಟುಂಬದ ಆದಾಯ ಮಿತಿ ನಗರ ಪ್ರದೇಶದಲ್ಲಿ ರೂ. 17000/- ಗ್ರಾಮಾಂತರ ಪ್ರದೇಶದಲ್ಲಿ ರೂ. 12000/-
ಇ) ಅರ್ಜಿದಾರಳು ಅಥವಾ ಆಕೆಯ ಮರಣ ಹೊಂದಿದ ಪತಿಯು ಅರ್ಜಿ ದಿನಾಂಕದಿಂದ ಹಿಂದಿನ ನಿರಂತರ 3 ವರ್ಷಗಳ ಅವಧಿಗೆ ಕಡಿಮೆ ಇಲ್ಲದಂತೆ ಈ ರಾಜ್ಯದ ನಿವಾಸಿಯಾಗಿರಬೇಕು.
ಈ) ಗಂಡನ ಮರಣ ದೃಢಪತ್ರ ಹಾಜರು ಪಡಿಸಬೇಕು.
ಉ) ಪಡಿತರ ಚೀಟಿ/ಮತದಾರ ಗುರುತು ಚೀಟಿ/ಆಧಾರ್ ಕಾರ್ಡ್ ಲಗತ್ತಿಸಿರಬೇಕು.
ಊ) ಪಿಂಚಣಿ ಮಂಜೂರಾತಿ ಅವಧಿ. ಅರ್ಜಿದಾರರ ಜೀವಿತ ಕಾಲದವರೆಗೆ ಅಥವಾ ಮರು ಮದುವೆ ಯಾಗುವ ತನಕ ಯಾ ಉದ್ಯೋಗ ಪಡೆದು ವಾರ್ಷಿಕ ಆದಾಯ ಮಿತಿಗಿಂತ ಜಾಸ್ತಿಯಾಗುವ ತನಕ ಅಥವಾ ಗಂಡು ಮಕ್ಕಳಿದ್ದಲ್ಲಿ ಅವರು ವಯಸ್ಕರಾಗಿ ಅರ್ಜಿದಾರರನ್ನು ಪೋಷಣೆ ಮಾಡುವ ತನಕ ಪಿಂಚಣಿ ಪಾವತಿಸಲಾಗುವುದು.
ಇ) ಪಿಂಚಣಿ ಕೊತ್ತ ರೂ. 600/- ಮಾಸಿಕ.

**3. ಅಂಗವಿಕಲ ವೇತನ: (07-11-1977ರಿಂದ ಜಾರಿ)**

**ಅರ್ಹತೆ:**

ಅ) ಬಿ.ಪಿ.ಎಲ್ ಕುಟುಂಬದವರಾಗಿರಬೇಕು.
ಆ) ಅರ್ಜಿದಾರರ ಅಂಗವಿಕಲತೆಯ ಪ್ರಮಾಣ ಶೇಕಡಾ 40%ಕ್ಕಿಂತ ಜಾಸ್ತಿ ಇರಬೇಕು.
ಆ) ಕುಟುಂಬದ ಆದಾಯದ ಮಿತಿ: ನಗರ ಪ್ರದೇಶದಲ್ಲಿ ರೂ. 17000/- ಗ್ರಾಮಾಂತರ ಪ್ರದೇಶದಲ್ಲಿ ರೂ. 12000/-
ಇ) ವೈದ್ಯಕೀಯ ಮಂಡಳಿಯಿಂದ ಪಡೆಯಲಾದ ಅಂಗವಿಕಲ ದೃಢಪತ್ರ ಹಾಗೂ ಅಂಗವಿಕಲ ಕಲ್ಯಾಣಾಧಿಕಾರಿಯಿಂದ ಸಹಿ ಮಾಡಲ್ಪಟ್ಟ ಅಂಗವಿಕಲ ಗುರುತಿನ ಚೀಟಿ ಹಾಜರು ಪಡಿಸಬೇಕು.
ಈ) ಅಂಗವಿಕಲತೆ ಅಂದರೆ: 1. ಅಂಧತ್ವ, 2. ಮಂದ ದೃಷ್ಟಿ, 3. ಶ್ರವಣ ದೋಷವುಳ್ಳವರು, 4. ಚಲನವಲನ ಅಂಗವಿಕಲತೆ, 5. ಮಾನಸಿಕ ಅಸ್ವಸ್ಥತೆ, 6. ಬುದ್ಧಿ ಮಾಂದ್ಯತೆ.
ಉ) ಅಂಗವಿಕಲತೆ ಶೇಕಡಾ 75ಕ್ಕಿಂತ ಕಡಿಮೆಯಿದ್ದಲ್ಲಿ ಪಿಂಚಣಿ ರೂ. 600/- ಶೇಕಡಾ 75ಕ್ಕಿಂತ ಜಾಸ್ತಿಯಿದ್ದಲ್ಲಿ ಪಿಂಚಣಿ ರೂ. 1,400/-

**4. ಸಂಧ್ಯಾ ಸುರಕ್ಷಾ ಯೋಜನೆ: (29-07-2007ರಿಂದ ಜಾರಿ)**

**ಅರ್ಹತೆ:** 1. ಸಣ್ಣ ರೈತರು, 2. ಅತೀ ಸಣ್ಣ ರೈತರು, 3. ಕೃಷಿ ಕಾರ್ಮಿಕರು, 4. ನೇಕಾರರು, 5. ಮೀನುಗಾರರು, 6. ಅಸಂಘಟಿತ ವಲಯ ಕಾರ್ಮಿಕರು

ಅ) 65 ವರ್ಷ ಹಾಗೂ ಮೇಲ್ಪಟ್ಟ ವಯಸ್ಸಿನವರಾಗಿರಬೇಕು.
ಆ) ಪತಿ ಪತ್ನಿಯ ಸಂಯೋಜಿತ ವಾರ್ಷಿಕ ಆದಾಯ ರೂ. 20000/-ಕ್ಕಿಂತ ಕಡಿಮೆ ಇರುವ ಪತಿ-ಪತ್ನಿ ಅರ್ಹರು. ಇಬ್ಬರ ಬ್ಯಾಂಕ್ ಉಳಿತಾಯ ಠೇವಣಿ ಮೊತ್ತ 10,000/-ಕ್ಕಿಂತ ಹೆಚ್ಚಿರಬಾರದು.
ಇ) ಬೇರೆ ಯಾವುದೇ ಪಿಂಚಣಿ ಪಡೆಯುತ್ತಿರಬಾರದು.
ಈ) ಪಡಿತರ ಚೀಟಿ, ಆಧಾರ್‌ಕಾರ್ಡ್, ಬ್ಯಾಂಕ್ ದಾಖಲೆ ಸಲ್ಲಿಸಬೇಕು.
ಉ) ಗಂಡು ಮಕ್ಕಳು ಪೋಷಣೆ ಮಾಡುವುದಿಲ್ಲವೆಂದು ಘೋಷಣೆ ಇರಬೇಕು.
ಊ) 65-79 ವರ್ಷ ಪಿಂಚಣಿ ಮೊತ್ತ ರೂ. 600/- 80 ವರ್ಷ ಮೇಲ್ಪಟ್ಟವರಿಗೆ 750/-

**5. ಅಂತ್ಯ ಸಂಸ್ಕಾರ ಸಹಾಯಧನ ಯೋಜನೆ: (ಜೂನ್ 2006ರಿಂದ ಜಾರಿ)**

ಬಡತನ ರೇಖೆಗಿಂತ ಕೆಳಮಟ್ಟದ ಕುಟುಂಬದ ಸದಸ್ಯರು ಮರಣ ಹೊಂದಿದಲ್ಲಿ ಅವರ ಅಂತ್ಯಕ್ರಿಯೆಗಾಗಿ ತಲಾ ರೂ.5000/- ಎಪ್ರಿಲ್ 2015ರಿಂದ ಸಹಾಯಧನವನ್ನು ಮೃತರ ಅವಲಂಬಿತ ಸದಸ್ಯರಿಗೆ ನೀಡಲಾಗುವುದು.

ಎರಡು ತಿಂಗಳ ಒಳಗೆ ಅರ್ಜಿ ಸಲ್ಲಿಸತಕ್ಕದು.

**6. ರಾಷ್ಟ್ರೀಯ ಕುಟುಂಬ ನೆರವು ಯೋಜನೆ:**

ಬಡತನ ರೇಖೆಗಿಂತ ಕೆಳಮಟ್ಟದ ಕುಟುಂಬದ ದುಡಿಯುವ ವ್ಯಕ್ತಿ ಮರಣ ಹೊಂದಿದ್ದಲ್ಲಿ ಅವರ ಕುಟುಂಬವು ಬೀದಿಗೆ ಬೀಳಬಾರದು ಎಂಬ ಉದ್ದೇಶದಿಂದ ಸರಕಾರವು ಈ ಸಹಾಯಧನ ಯೋಜನೆಯನ್ನು ಜಾರಿಗೆ ತಂದಿದೆ.

**ಅರ್ಹತೆ:**

ಅ) ಮೃತ ವ್ಯಕ್ತಿಯು ಮರಣ ಕಾಲಕ್ಕೆ 18 ವರ್ಷದಿಂದ 59 ವರ್ಷದ ಮಿತಿಯೊಳಗಿರಬೇಕು.
ಆ) ಮೃತ ವ್ಯಕ್ತಿಯ ದುಡಿಮೆಯು ಕುಟುಂಬದ ಒಟ್ಟು ದುಡಿಮೆಯ ಗಣನೀಯ ಪ್ರಮಾಣದ್ದಾಗಿರಬೇಕು.
ಇ) ಸಹಾಯಧನದ ಮೊತ್ತ ರೂ.20,000/-
ಈ) ಆದಾಯದ ಮಿತಿ ರೂ. 20,000/- (ಗ್ರಾಮಾಂತರ). ರೂ. 17,000/-(ನಗರ ಪ್ರದೇಶ)
ಉ) ಮೃತ ವ್ಯಕ್ತಿಯು ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ವಾಸಿಸುತ್ತಿರಬೇಕು.
ಊ) ವ್ಯಕ್ತಿಯು ಮೃತಪಟ್ಟ 6 ತಿಂಗಳ ಒಳಗೆ ಅರ್ಜಿ ಸಲ್ಲಿಸಬೇಕು.

**7. ಮೈತ್ರಿ ಯೋಜನೆ: (01-08-2013ರಿಂದ ಜಾರಿ)**

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಬಡತನ ರೇಖೆಗಿಂತ ಕೆಳಗಿರುವ ಅಲ್ಪಸಂಖ್ಯಾತರಿಗೆ ಮಾಸಾಶನ ನೀಡುವ ಮೈತ್ರಿ ಯೋಜನೆ.

**ಅರ್ಹತೆ:**

ಅ) ಬಿ.ಪಿ.ಎಲ್ ಕುಟುಂಬದವರಾಗಿರಬೇಕು.
ಆ) 25 ರಿಂದ 65 ವರ್ಷದ ಒಳಗಿನವರು.
ಇ) ಕುಟುಂಬದ ಆದಾಯದ ಮಿತಿ ನಗರ ಪ್ರದೇಶದಲ್ಲಿ ರೂ. 17,000/- ಗ್ರಾಮಾಂತರ ಪ್ರದೇಶದಲ್ಲಿ ರೂ. 12,000/-
ಈ) ಸಹಾಯಧನ ಮೊತ್ತ ರೂ. 600/- ಮಾಸಿಕ
ಉ) ಲಿಂಗತ್ವ ಅಲ್ಪಸಂಖ್ಯಾತರು ಅಂದರೆ – ಹಿಜ್ರಾಗಳು, ಕೋರಿಗಳು ಜೋಗಿತ್ವಯ/ ಎಫ್ ಟು ಎಮ್/ ಎಫ್ ಟು ಎಫ್/ ಮಂಗಳಮುಖಿಯರು.
ಊ) ಚುನಾವಣಾ ಗುರುತಿನ ಚೀಟಿ ಅಥವಾ ವಿಳಾಸದ ಬಗ್ಗೆ ದೃಢೀಕರಣ ದಾಖಲೆ, ವಯಸ್ಸಿನ ಬಗ್ಗೆ ವೈದ್ಯಕೀಯ ದೃಢಪತ್ರ, ಕೆ. ಎಸ್.ಎಫ್.ಎಂ ಸಂಸ್ಥೆಗಳ ನೊಂದಾಯಿತ ಸದಸ್ಯತ್ವದ ಬಗ್ಗೆ ಅಫಿದಾವಿತ್ ಪ್ರಮಾಣ ಪತ್ರ.

**8. ಮನಸ್ವಿನಿ ಯೋಜನೆ: (01-08-2013ರಿಂದ ಜಾರಿ)**

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅವಿವಾಹಿತ ಹಾಗೂ ವಿಚ್ಛೇದಿತ ಮಹಿಳೆಯರಿಗಾಗಿ ಮಾಸಾಶನ.

**ಅರ್ಹತೆ:**

ಅ) 40ರಿಂದ 64 ವರ್ಷದ ಒಳಗಿನ ಅವಿವಾಹಿತ/ವಿಚ್ಛೇದಿತ ಮಹಿಳೆಯರು ಅರ್ಹರು.
ಆ) ಪಡಿತರ ಚೀಟಿ (ಪಡಿತರ ಚೀಟಿ ಇಲ್ಲದಿದ್ದಲ್ಲಿ ಸ್ವಯಂ ಘೋಷಿತ ಆದಾಯ ಪ್ರಮಾಣ ಪತ್ರ)
ಇ) ಬಿಪಿಎಲ್ ಕಾರ್ಡ್ ಹೊಂದಿದವರಾಗಿರಬೇಕು.
ಈ) ರೂ. 600/- ಮಾಸಿಕ ಪರಿಹಾರ

**9. ಜನಶ್ರೀ ಯೋಜನೆ: (ದಿನಾಂಕ 02-10-2007ರಿಂದ ಜಾರಿಗೆ ಬಂದಿದೆ)**

ಅ) 18-59 ವರ್ಷದೊಳಗಿನ ಗ್ರಾಮೀಣ ಭೂ ರಹಿತ ಕುಟುಂಬದ ಮುಖ್ಯಸ್ಥನ ಹೆಸರಿನಲ್ಲಿ 200/- ವಾರ್ಷಿಕ ವಿಮೆ.
ಆ) ಆ ಕುಟುಂಬದ 2 ಮಕ್ಕಳಿಗೆ 9-12ನೇ ತರಗತಿಯವರಿಗೆ ತಿಂಗಳಿಗೆ ರೂ. 100/- ವಿದ್ಯಾರ್ಥಿ ವೇತನ.
ಇ) ಕುಟುಂಬ ಮುಖ್ಯಸ್ಥ ಮರಣ ಹೊಂದಿದಲ್ಲಿ ಈ ಕೆಳಗಿನಂತೆ ಪರಿಹಾರ :

1) ನೈಸರ್ಗಿಕ ಸಾವು – 30,000/-
2) ಆಕಸ್ಮಿಕ ಸಾವು – 75,000/-
3) ಶಾಶ್ವತ ಅಂಗವಿಕಲತೆ – 75,000/-
4) ಭಾಗಶಃ ಅಂಗವಿಕಲತೆ – 37,500/-

ಮೃತರ ಕುಟುಂಬದ ಸದಸ್ಯರು 6 ತಿಂಗಳೊಳಗೆ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು.

**10. ಆದರ್ಶ ವಿವಾಹ ಯೋಜನೆ:**

ಅ) ಈ ಯೋಜನೆಯನ್ನು ಸರಳ ವಿವಾಹ ಯೋಜನೆ ಎಂದು ಕರೆಯುತ್ತಾರೆ.
ಆ) ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ 25 ಜೋಡಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ 10 ಜೋಡಿಗಳ ವಿವಾಹ ನಡೆದಿರಬೇಕು.
ಇ) ಈ ಯೋಜನೆಯಲ್ಲಿ ಮದುವೆಯಾಗುವ ಯುವತಿಗೆ 10,000/-ಗಳ ಪ್ರೋತ್ಸಾಹಧನ. ಇದನ್ನು 2 ವರ್ಷಗಳ ಅವಧಿಗೆ ಠೇವಣಿ ಇಡಬೇಕು.
ಈ) ವಿವಾಹ ನೋಂದಣಿ ಪ್ರಮಾಣಪತ್ರ, ಬ್ಯಾಂಕ್ ಖಾತೆ ಮತ್ತು ವಧೂವರರ ಭಾವಚಿತ್ರ ಇರಬೇಕು.

**11. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಅವರ ಪತ್ನಿಯರಿಗೆ ತಿಂಗಳಿಗೆ ರೂ. 2000/-ರಂತೆ ವಿಧವಾ ವೇತನ ಮಂಜೂರಾತಿ ಪ್ರಕ್ರಿಯೆ ಜಾರಿಗೆ ಬಂದಿದೆ.**

ಈ ಎಲ್ಲಾ ಸೌಲಭ್ಯ-ಸವಲತ್ತುಗಳನ್ನು ಅರ್ಹರಿಗೆ ಮಾತ್ರ ನೀಡಲಾಗುತ್ತದೆ. ಅನರ್ಹರು ಇಂತಹ ಸೌಲಭ್ಯಗಳನ್ನು ಸುಳ್ಳು ದಾಖಲೆಗಳನ್ನು ನೀಡಿ ಪಡೆದುಕೊಂಡರೆ ಅಂತಹ ಪ್ರಕರಣಗಳನ್ನು ಗ್ರಾಮ ಕರಣಿಕರು / ಕಂದಾಯ ನಿರೀಕ್ಷಕರು ಪತ್ತೆ ಹಚ್ಚಿ ವರದಿ ಮಂಡಿಸಲು ಅವಕಾಶ ಕಲ್ಪಿಸಲಾಗಿದೆ. ಈ ಎಲ್ಲಾ ಅರ್ಜಿಗಳ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ನಾಡಾ ಕಛೇರಿ/ತಾಲೂಕು ಕಛೇರಿಗಳನ್ನು ಸಂಪರ್ಕಿಸಬಹುದು.

# ದ.ಕ. ಜಿಲ್ಲೆಯಲ್ಲಿ ಕುಮ್ಕಿ ಜಮೀನುಗಳಲ್ಲಿ ವರ್ಗದಾರರಿಗೆ ಇರುವ ವಿಶೇಷ ಸೌಲಭ್ಯಗಳು



ಶ್ರೀ ಪದ್ಮನಾಭ ಎಮ್.
ನಿವೃತ್ತ ಅಧೀಕ್ಷಕರು, ದ.ಕ. ಜಿಲ್ಲಾಧಿಕಾರಿ ಕಛೇರಿ
ಕಂದಾಯ ಸಲಹೆಗಾರರು
ಸ್ವಸ್ತಿಕಾ ಕನ್ಸಲ್ಟೆನ್ಸಿ ಸರ್ವಿಸಸ್

...... 1ನೇ ಪುಟದಿಂದ

ಮದ್ರಾಸು ಕಂದಾಯ ಅಳತೆಯ 1896ರ ಬಿ.ಎಸ್.ಓ. (Board Standing Order) 15(40)ರ ಸ್ಥಾಯಿ ಆದೇಶದ ಮೇರೆಗೆ ಕದಿಂ ವರ್ಗ ಭೂಮಿಗೆ ಅದರ ಸುತ್ತಲಿನ **100 ಗಜ ಅಂದರೆ 450 ಲಿಂಕ್ಸ್ (90 ಮೀಟರ್)** ವ್ಯಾಪ್ತಿಯಲ್ಲಿ ಬರುವ ಸರಕಾರಿ ಅನಾಧೀನ ಭೂಮಿ (Govt Assessed Waste Land)ಯು ಕುಮ್ಕಿ ಹಕ್ಕಿಗೆ ಒಳಪಟ್ಟ ಭೂಮಿಯಾಗಿದ್ದು, ಭೂಮಿಯ ವರ್ಗದಾರರು/ಖಾತೆದಾರರು, ಒಳ ವರ್ಗದಾರರು, ಹಾಗೂ ಮೂಲ ಗೇಣಿದಾರರು ಕುಮ್ಕಿ ಜಮೀನುಗಳ ಕುಮ್ಕಿದಾರರಾಗಿತ್ತಾರೆ. ಕುಮ್ಕಿ ಹಕ್ಕು ಕದಿಂ ಭೂಮಿಗಳಿಗೆ ಮಾತ್ರ ಇರುತ್ತದೆ. ಕುಮ್ಕಿ ಹಕ್ಕಿನಂತೆ ಕೃಷಿ ಕಾರ್ಯಗಳಿಗೆ ಯಾವುದೇ ಪರವಾನಿಗೆ ಇಲ್ಲದೆ ಕೃಷಿ ಉಪಯೋಗಕ್ಕೆ ಸೊಪ್ಪು, ಉರುವಲು ಕಟ್ಟಿಗೆ, ದನಗಳನ್ನು ಮೇಯಲು ಬಿಡಲು ಮತ್ತು ಕಾಡು ಉತ್ಪತ್ತಿಗಳನ್ನು ಸಂಗ್ರಹಿಸಲು ಕುಮ್ಕಿದಾರರು ಅಧಿಕಾರ ಹೊಂದಿರುತ್ತಾರೆ. ಕುಮ್ಕಿದಾರರು ಕುಮ್ಕಿ ಸ್ಥಳದಲ್ಲಿ ತಾತ್ಕಾಲಿಕವಾಗಿ ಬೆಳೆದ ಬೆಳೆಗಳಿಗೆ ಯಾವುದೇ ತರದ ತೆರಿಗೆ ಅಥವಾ ಭೂಕಂದಾಯ ಪಾವತಿಸುವ ಅಗತ್ಯವಿಲ್ಲ.

ಇಸವಿ 1887ರಲ್ಲಿ ಅಂದಿನ ಜಿಲ್ಲಾ ಕಲೆಕ್ಟರರು ಶ್ಯಾನುಭೋಗ ಮತ್ತು ಪಟೇಲರಿಗೆ ಬರೆದ ಪತ್ರದಲ್ಲಿ ಕುಮ್ಕಿ ಹಕ್ಕಿನ ಉಪಯೋಗದ ಬಗ್ಗೆ ದ.ಕ. ಜಿಲ್ಲೆಯಲ್ಲಿ ಕದಿಂ ವರ್ಗ ಸ್ಥಳವೆಂದು ಒಪ್ಪಬಹುದಾದ ಭೂಮಿಗೆ 100 ಗಜ ದೂರದಲ್ಲಿರುವ ಸರಕಾರಿ ಭೂಮಿ (Govt Assessed Waste Land) ಆಯಾ ವರ್ಗದಾರರಿಗೆ ಬಿಟ್ಟು ಕೊಡಲಾಗಿದೆ ಎಂಬ ವಿಚಾರವಿದೆ ಮತ್ತು ಕುಮ್ಕಿ ಸ್ಥಳದಲ್ಲಿ ಆಕ್ರಮಣ ಅಥವಾ ಆಗಮೆ ಮಾಡಿದರೆ ಅಥವಾ ಗೇಣಿ ಕಟ್ಟಿ ಕೊಟ್ಟರೆ, ಸದರಿ ಭೂಮಿಗೆ ಭೂಕಂದಾಯ ಹೊರಿಸಲಾಗುವುದೆಂದು ತಿಳಿಸಲಾಗಿದೆ. ಈ ಹಿನ್ನಲೆಯಲ್ಲಿ ಹೆಚ್ಚಿನ ವರ್ಗ ಭೂಮಿ ಪರಾಭಾರೆ ಯಾ ವ್ಯವಹರಣೆಯ ಸಮಯದಲ್ಲಿ ವರ್ಗ ಭೂಮಿಯೊಂದಿಗೆ ಅದರ ಲಗತ್ತು ಕಾಡು ಕರೆ ಕುಮ್ಕಿ ಸೇರಿ ಎಂದು ಬರೆಯಲಾಗುತ್ತದೆ.

ಕೊಡಗು ರಾಜರ ಆಳ್ವಿಕೆಗೆ ಒಳಪಟ್ಟ ಈಗಿನ ಸುಳ್ಯ ತಾಲೂಕಿನ ಕೆಲವು ಗ್ರಾಮಗಳಲ್ಲಿ ಕುಮ್ಕಿಯಂತೆ ಬಾಣೆ, ಕಾನ ಸೌಲಭ್ಯಗಳ ಜಮೀನುಗಳಿವೆ. ಬಾಣೆ ಎಂಬುದು ಕುಮ್ಕಿ ಜಮೀನಿನಂತೆ ವರ್ಗ ಭೂಮಿಗೆ ತಾಗಿ ಕೊಂಡಿರದೆ, ಗಡಿ ಗುರುತಿಸಿ ಇಮ್ಮಡಿ ವಿಸ್ತೀರ್ಣವನ್ನು ಹೊಂದಿರುವ ಬಾಣೆ ರಿಜಿಸ್ಟರ್‌ನಲ್ಲಿ ದಾಖಲೆಯಾದ ನಕ್ಷೆ ಇರುವ ಜಮೀನು ಆಗಿರುತ್ತದೆ. ವರ್ಗ ಜಮೀನನ್ನು ಕೊಂಡವರು ದೊರೆತಷ್ಟು ಬಾಣೆ ಜಮೀನುಗಳನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಸುಳ್ಯ ತಾಲೂಕಿನ 21 ಗ್ರಾಮಗಳಲ್ಲಿ ಬಾಣೆ ಜಮೀನುಗಳಿವೆ.

ಕಾನ ಹಿಡುವಳಿಯ ಅಳತೆ ಮತ್ತು ವಿಸ್ತೀರ್ಣ ಅಂಗೀರಸಾ ಚಿಟ್ಟಾ ದಾಖಲೆಯಲ್ಲಿ ಇದ್ದು ನಕ್ಷೆ ಇದೆ. ಸುಳ್ಯ ತಾಲೂಕಿನಲ್ಲಿ 22 ಗ್ರಾಮಗಳಲ್ಲಿ ಕಾನ ಜಮೀನು ವಿವರಗಳು ಇರುತ್ತದೆ. ಕಾನ ಜಮೀನು ಕಾಡುಗಳಿಂದ ತುಂಬಿರುತ್ತದೆ. ಕಾನ ಜಮೀನಿಗೆ ಇಂತಿಷ್ಟು ತೀರ್ವೆ ವಿಧಿಸಲಾಗುತ್ತಿತ್ತು. ಕಾನ ಜಮೀನು ಬಾಣೆ, ಕುಮ್ಕಿಯಂತೆ ಪರಾಭಾರೆ ಸಮಯದಲ್ಲಿ ವರ್ಗಾವಣೆ ಆಗಬೇಕಿಲ್ಲ. ಅವುಗಳನ್ನು ಭಾಗಶ: ಅಥವಾ ಸಂಪೂರ್ಣವಾಗಿ ಉಳಿಸಿಕೊಂಡು ದಾಖಲೆಗಳನ್ನು ನೋಂದಾಯಿಸಬಹುದು.

ಕಾನ, ಬಾಣೆ ಮತ್ತು ಕುಮ್ಕಿ ವಿವರಗಳು ಪಹಣಿಯಲ್ಲಿ ಕಾಲಂ 6ರಲ್ಲಿ ಸರಕಾರಿ ಕಾನ, ಸರಕಾರಿ ಬಾಣೆ, ಅನಾಧೀನ ದಾಖಲೆ ಇದ್ದು, ಕುಮ್ಕಿ ಬಗ್ಗೆ ಕದಿಂ ವರ್ಗ ಜಮೀನಿನ ವಿವರಗಳನ್ನು ಪಹಣಿ ಕಾಲಂ 6ರಲ್ಲಿ ಕದಿಂ, ಹೊಸ ಇತ್ಯಾದಿ ಪದಗಳಿಂದ ದಾಖಲೆಗಳನ್ನು ಮಾಡಿದೆ.

1896ರ ಕುಮ್ಕಿ ನಿಯಮಗಳ ಅಡಿಯಲ್ಲಿ ಹಿಂದಿನ ಸರಕಾರಿ ಆದೇಶಗಳಲ್ಲಿ ಕಾನ, ಬಾನ, ಕುಮ್ಕಿಗಳನ್ನು ಅರಣ್ಯ ಎಂದೂ ಗುರುತಿಸಿಕೊಂಡು 1882ರ ಮದ್ರಾಸು ಅರಣ್ಯ ಕಾಯಿದೆಯಲ್ಲಿ ನಿಯಂತ್ರಿಸಲ್ಪಡುತ್ತಿತ್ತು. ಕರ್ನಾಟಕ ಅರಣ್ಯ ಅಧಿನಿಯಮ 1963 ಕಂಡಿಕೆ 117ರಂತೆ ಮದ್ರಾಸ್ ಅರಣ್ಯ ಕಾಯ್ದೆ 1882ನ್ನು ಅನೂರ್ಜಿತ ಮಾಡಿದ್ದರೂ, ಅದರ ಅಡಿಯಲ್ಲಿ ಮಾಡಿದ ಕುಮ್ಕಿ ನಿಯಮ 1896ರ ಪ್ರಕಾರ ಅನುಭವಿಸುತ್ತಿದ್ದ ಕುಮ್ಕಿ ಹಕ್ಕನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಂಡಿಕೆ 79(2) ಅಡಿಯಲ್ಲಿ ಮುಂದುವರಿಸಲಾಗಿದೆ. ಭೂ ಕಂದಾಯ ಕಾಯಿದೆ 1964ರ ಕಲಂ 79(2)ರಡಿಯಲ್ಲಿ ಕುಮ್ಕಿ ಹಕ್ಕು ಮುಂದುವರಿಸಲ್ಪಟ್ಟಿದ್ದರೂ ಅದರ ಬಗ್ಗೆ ಹೆಚ್ಚಿನ ವಿವರಣೆ ಕೊಟ್ಟಿಲ್ಲ. ಈ ಬಗ್ಗೆ ಮದ್ರಾಸು ಕಂದಾಯ ಬೋರ್ಡಿನ ನಿಯಮಗಳನ್ನು ಅನುಸರಿಸದೆ ನಿರ್ವಾಹವಿಲ್ಲ. ಈ ವಿಶೇಷ ಹಕ್ಕನ್ನು ವಿರಹಿತಪಡಿಸಿ ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿ ಮಂಜೂರು ಮಾಡಲು ಈ ಕಲಂನಲ್ಲಿ ಅವಕಾಶ ಕಲ್ಪಿಸಲಾಗಿದೆ.

ಕುಮ್ಕಿ ವಿಸ್ತೀರ್ಣವು ಕದಿಂ ಭೂಮಿಯ ವ್ಯಾಪ್ತಿಯಲ್ಲಿ ದೊರೆಯುವ ಭೂಮಿಯ ವಿಸ್ತೀರ್ಣವನ್ನು ಅವಲಂಬಿಸಿರುತ್ತದೆ. ವರ್ಗದಾರರು ಹೊಂದಿದ ಒಟ್ಟು ನಂಜ, ಭಾಗಾಯತ್ ಕದಿಂ ಸ್ಥಳಗಳ ಎರಡು ಪಾಲು ಕುಮ್ಕಿ ಅರ್ಹತೆ ಈ ಹಿಂದೆ ವ್ಯವಸ್ಥಿತ ರೀತಿಯಲ್ಲಿ ನಡೆದುಕೊಂಡು ಬಂದಿತ್ತು.

ಕುಮ್ಕಿಯ 100(ನೂರು) ಗಜದೊಳಗೆ ರಸ್ತೆ ಹಾದು ಹೋಗುತ್ತಿದ್ದರೆ ರಸ್ತೆ ಬಿಟ್ಟು ಉಳಿದ ಜಮೀನಲ್ಲಿ ಕುಮ್ಕಿ ಹಕ್ಕನ್ನು ಉಪಯೋಗಿಸಲು ಅವಕಾಶವಿದೆ. ಇಬ್ಬರು ಯಾ ಹೆಚ್ಚು ಕದಿಂ ವರ್ಗದಾರರ ಮಧ್ಯೆ ಸರಕಾರಿ ಪಾಳು ಭೂಮಿ (Govt Assessed Waste Land) 100 ಗಜದಷ್ಟು ಲಭ್ಯವಿಲ್ಲದ್ದರೆ, ಇದ್ದಷ್ಟನ್ನು ಹಂಚಿಕೊಂಡು ಅನುಭವಿಸಬೇಕಾಗುತ್ತದೆ. ಕುಮ್ಕಿ ಭೂಮಿಯಲ್ಲಿ ಇರುವ ಗಂಧದ ಕಾಡು ಜಾತಿಯ ಮರಗಳಿದ್ದರೆ ಅವುಗಳು ಅರಣ್ಯ ಕಾಯಿದೆ ವ್ಯಾಪ್ತಿಗೆ ಒಳಪಡುತ್ತದೆ.

ಬಿ.ಎಸ್.ಓ (Board Standing Order) 15(33,35)ರ ಸ್ಥಾಯಿ ಆದೇಶದಡಿಯಲ್ಲಿ ಮಂಗಳೂರು, ಉಡುಪಿ, ಕಾಸರಗೋಡು, ಬಂಟ್ವಾಳ, ಮೂಲ್ಕಿ, ಕಾರ್ಕಳ ಪಟ್ಟಣ ಪ್ರದೇಶಗಳಲ್ಲಿ ಕದಿಂ ವರ್ಗ ಭೂಮಿಗಳಿಗೆ ಕುಮ್ಕಿ ಹಕ್ಕು ಬರುವುದಿಲ್ಲ ಎಂದು ತಿಳಿಸಲಾಗಿದೆ.

ಕದಿಂ ವರ್ಗ ಜಮೀನಿಗೆ ತಾಗಿ ಬೇರೆ ಗ್ರಾಮದಲ್ಲಿ ಸರ್ಕಾರಿ ಅನಾಧೀನ ಬೀಳು ಜಮೀನು (Govt Assessed Waste Land) ಇದ್ದರೆ, ಆ ಜಮೀನನ್ನು ಕುಮ್ಕಿ ಜಮೀನಾಗಿ ಉಪಯೋಗಿಸಲು ಅವಕಾಶ ಇರುತ್ತದೆ. ವರ್ಗದಾರರ ಜಮೀನಿನ ವಿಸ್ತೀರ್ಣ ಬೇರೆ ಬೇರೆ ಯಾಗಿದ್ದಲ್ಲಿ ಕುಮ್ಕಿ ಜಮೀನು ಸಹ ಆ ವ್ಯಕ್ತಿಗಳಿಗೆ ಸಮಾನ ವಿಸ್ತೀರ್ಣವಾಗಿರದೆ, ವರ್ಗ ವಿಸ್ತೀರ್ಣಕ್ಕೆ ಅನುಗುಣವಾಗಿ ಉಪಯೋಗಿಸಲು ಅವಕಾಶವಿದೆ. ಇದನ್ನು Common Kumki ಎಂದು ಕರೆಯಲಾಗಿದೆ. ಕುಮ್ಕಿ ಜಮೀನಿನಲ್ಲಿ ಅಕ್ರಮಣವಾದರೆ ಕದಿಂ ವರ್ಗದಾರರು ಸದ್ರಿ ಅಕ್ರಮಣವನ್ನು 6 ತಿಂಗಳೊಳಗೆ ತೆರವುಗೊಳಿಸಲು ಕ್ರಮ ಮಾಡದಿದ್ದರೆ ಅಥವಾ ತಹಶಿಲ್ದಾರರಿಗೆ ಬರಹದ ಮೂಲಕ ಅರ್ಜಿ ಮಾಡದಿದ್ದರೆ ಆ ಜಮೀನಿನ ಕುಮ್ಕಿ ಹಕ್ಕು ವಿರಹಿತ ಗೊಳ್ಳಲ್ಪಡುತ್ತದೆ.

ಆದರೆ ಕುಮ್ಕಿ ಜಮೀನುಗಳ ಬಗ್ಗೆ ಕೆಲವೊಂದು ಸಂಶಯಗಳಿಂದಾಗಿ, ವರ್ಗದಾರರು ತಾವು ಹೊಂದಿರುವ ಜಮೀನು ಹೊಸ ವರ್ಗ ದರ್ಕಾಸ್ತು ಎಂದು ಇದ್ದರೂ ಅದರ ಸುತ್ತಲಿನ ಸರ್ಕಾರಿ ಜಮೀನನ್ನು ಕುಮ್ಕಿ ಜಮೀನು ಎಂದು ತಪ್ಪಾಗಿ ಅರ್ಥೈಸಿ ಸ್ವಾಧೀನ ಹೊಂದಿರುತ್ತಾರೆ.

ತಮ್ಮ ಸ್ವಂತ ಜಮೀನಿಗೆ ಹೊಂದಿರುವ ಕದಿಂ ವರ್ಗದ 450 ಲಿಂಕ್ಸ್ (90 ಮೀಟರ್) ವ್ಯಾಪ್ತಿಯ ಜಮೀನು ಮಾತ್ರ ಕುಮ್ಕಿ ಹಕ್ಕಿಗೆ ಒಳಪಟ್ಟಿದ್ದರೂ ಕೆಲವೊಂದಿಷ್ಟು ಜನ ಅಲ್ಲಿ ಲಭ್ಯವಿರುವ ಎಕ್ರೆಗಟ್ಟಲೆ ಸರಕಾರಿ ಜಮೀನನ್ನು ಕುಮ್ಕಿ ಎಂದು ಭಾವಿಸಿ ಅನುಭವಿಸಲಾಗುತ್ತಿದೆ.

ಕದಿಂ ವರ್ಗದ ಸುತ್ತಲಿನ ಕುಮ್ಕಿ ಜಾಗವನ್ನು ಕಂದಾಯ ಸರ್ವೆ ಅಳತೆಯಿಂದ ಪ್ರತ್ಯೇಕಿಸಿ ಗುರುತಿಸದ ಕಾರಣ ಅಲ್ಲಿರುವ ಕುಮ್ಕಿ ಹೊರತುಪಡಿಸಿದ ಇತರೆ ಸರಕಾರಿ ಜಾಗಗಳನ್ನು ಸಹ ಕುಮ್ಕಿ ಜಾಗವೆಂದು ಭಾವಿಸಿ ಅನುಭವಿಸಲಾಗುತ್ತಿದೆ.

ಆದರೆ ಪ್ರಸ್ತುತ ಕುಮ್ಕಿ ಹಕ್ಕನ್ನು ಚಲಾಯಿಸುವಲ್ಲಿ ಕೆಲವೊಂದು ಅಸ್ಥಿರತೆಗಳು ಕಂಡು ಬರುತ್ತದೆ. ಕುಮ್ಕಿ ಸವಲತ್ತಿನ ಗೊಂದಲದಿಂದ ಕೃಷಿಗೆ ಅಗತ್ಯವಾದ ಹಸಿರೆಲೆ ಗೊಬ್ಬರ, ಉರುವಲು, ಸಿಗದೆ ಇರುವುದು. ಇತ್ತೀಚೆಗಿನ ಸರಕಾರಿ ಜಮೀನಿನ ಒತ್ತುವರಿ ತೆರವು ಪ್ರಕ್ರಿಯೆಯಲ್ಲಿ ಕುಮ್ಕಿ ಜಮೀನು ಸಹ ಸರಕಾರಿ ಜಮೀನು ಎಂದು ಪರಿಗಣಿಸಲ್ಪಟ್ಟಿರುವುದರಿಂದ ಅಕ್ರಮಣ ತೆರವು ಪ್ರಕ್ರಿಯೆ ನಡೆಯ ಬಹುದೆಂದು ಕುಮ್ಕಿದಾರರಲ್ಲಿ ಭಾವನೆ ಉಂಟಾಗಿರುವುದು.

ಕುಮ್ಕಿ ಹಕ್ಕಿನ ಜಮೀನುಗಳ ಸವಲತ್ತಿನ ರಕ್ಷಣೆಗಾಗಿ ಕುಮ್ಕಿದಾರರು ಸಿವಿಲ್ ನ್ಯಾಯಾಲಯ, ಉಚ್ಚ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯದವರೆಗೂ ನ್ಯಾಯಕ್ಕಾಗಿ ನಿರ್ವಾಹವಿಲ್ಲದೆ ಮೊರೆ ಹೋಗಿ ಬೇರೆ ಬೇರೆ ಆದೇಶ ಪಡೆದು ಕೊಂಡಿರುವುದು.

ಕದಿಂ ವರ್ಗದ ಕೃಷಿ ಭೂಮಿಯನ್ನು ಭೂ ಪರಿವರ್ತಿಸಿದಾಗ ಅದರ ಲಗತ್ತು ಇರುವ ಕುಮ್ಕಿ ಜಮೀನನ್ನು ಕುಮ್ಕಿ ವ್ಯಾಪ್ತಿಯಿಂದ ವಿರಹಿತಪಡಿಸದೇ ಇರುವುದು. ಕುಮ್ಕಿ ಮಿತಿಯಲ್ಲಿ ಬರುವ ಕುಮ್ಕಿ ಜಮೀನನ್ನು ಇತರರು ಅಕ್ರಮಣ ಮಾಡಿದರೂ ಕುಮ್ಕಿ ಹಕ್ಕು ರದ್ದುಗೊಳ್ಳದೆ ಇರುವುದು ಕದಿಂ ವರ್ಗದಾರರು ಅಸಕ್ತರಾಗಿದಲ್ಲಿ ಬಲಾಢ್ಯ ಬಾಜುದಾರ ವರ್ಗದಾರರು ಕುಮ್ಕಿ ಜಮೀನನ್ನು ಬಾಚಿ ಕೊಂಡು ಅನುಭವಿಸುತ್ತಿರುವುದು.

ಅಕ್ರಮ ಸಕ್ರಮ ನಿಯಮದ ಅಡಿಯಲ್ಲಿ ಜಮೀನು ಮೂಜೂರಾತಿಗೆ ಗರಿಷ್ಠ ಮಿತಿ 2 ಹೆಕ್ಟೇರು (ಸ್ವಂತ ಜಮೀನು ಸೇರಿ) ನಿಗದಿ ಮಾಡಿದ್ದು ವರ್ಗದಾರರ ಬಳಿ ಇದ್ದಕ್ಕಿಂತ ಹೆಚ್ಚು ಜಮೀನು ಸ್ವಾಧೀನವಿರುವುದು. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಅಡಿಯಲ್ಲಿ ಕಲಂ 94A, 94B, 94C, ಅಕ್ರಮ ಸಕ್ರಮದಂತೆ ಕುಮ್ಕಿ ಜಮೀನನ್ನು ಮಂಜೂರು ಮಾಡಲು ಅವಕಾಶವಿಲ್ಲ ದಿದ್ದರೂ ಮಂಜೂರು ಮಾಡಿರುವುದು ಕುಮ್ಕಿ ವಿಷಯದ ಕೆಲವು ಸಮಸ್ಯೆಗಳಾಗಿವೆ.

19ನೇ ಶತಮಾನದಿಂದಲೂ ಮುಂದುವರಿದಿರುವ ಈ ಕುಮ್ಕಿ ಹಕ್ಕು/ಸೌಲಭ್ಯ ರೈತರಿಗೆ ಒಂದು ವರದಾನ ವಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಗಂತೂ ಅತೀ ಅಗತ್ಯವಿದೆ. ವರ್ಗದಾರ, ಗೇಣಿದಾರ, ಒಳ ವರ್ಗದಾರರ ಮೇಲೆ ನೇರ ಕುಮ್ಕಿದಾರನ ಮತ್ತು ಕಾಮನ್ ಕುಮ್ಕಿದಾರನ ಪ್ರಾತಿನಿಧ್ಯ ಮುಂದುವರಿಸಿಕೊಂಡು ಹೋದರೆ ಕೃಷಿಗೆ ಉಪಯೋಗವಾದೀತು.

## ಅನಧಿಕೃತ ಸಾಗುವಳಿ ಸಕ್ರಮಕ್ಕೆ ಅರ್ಜಿ ಆಹ್ವಾನ

ಸರ್ಕಾರವು ಸರಕಾರದ ಅಧಿಸೂಚನೆ ಸಂಖ್ಯೆ ಆರ್.ಡಿ.40 ಎಲ್‌ಜಿಪಿ 2018 ಬೆಂಗಳೂರು 4-10-2018ರಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94-ಎ(4)ಗೆ ತಿದ್ದುಪಡಿ ತಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅದರಂತೆ ಕರ್ನಾಟಕದ ಭೂಕಂದಾಯ ನಿಯಮಗಳು 1966ರ ನಿಯಮ 108ಸಿಸಿಸಿಯನ್ನು ಸೇರ್ಪಡಿಸಿ ನಮೂನೆ 57 ರಡಿ ಅರ್ಜಿಯನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಅದರಂತೆ ದಿನಾಂಕ 01-01-2015ರ 3 ವರ್ಷಗಳ ಮುಂಚಿತವಾಗಿ ಸರಕಾರಿ ಜಮೀನಿನ ಅನಧಿಕೃತ ಅನುಭೋಗವನ್ನು ಹೊಂದಿರುವವರು ಅಂತಹ ಜಮೀನುಗಳ ಸಕ್ರಮಕ್ಕಾಗಿ ನಮೂನೆ 57ರಲ್ಲಿ ಸಂಬಂಧಪಟ್ಟ ತಾಲೂಕು ಕಛೇರಿಗೆ ಅರ್ಜಿ ಸಲ್ಲಿಸಲು ದಿನಾಂಕ 16-02-2019ರವರೆಗೆ ಕಾಲಾವಕಾಶವಿರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಈ ಹಿಂದೆ ನಮೂನೆ 50 ಮತ್ತು ನಮೂನೆ 53ರಲ್ಲಿ ಅರ್ಜಿಯನ್ನು ಸಲ್ಲಿಸದಿರುವವರಿಗೆ ಅವಕಾಶ ಕಲ್ಪಿಸಲಾಗಿದೆ. ಇದರಂತೆ ಪುರಸಭೆ ವ್ಯಾಪ್ತಿಯಿಂದ 5 ಕಿ.ಮೀ., ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 10 ಕಿ.ಮೀ. ವರೆಗಿನ ಗ್ರಾಮದಲ್ಲಿ ಮಂಜೂರಾತಿಗೆ ಅವಕಾಶವಿರುವುದಿಲ್ಲ.

# ಭೂ ದಾಖಲೆಯ ಬೆನ್ನೆಲುಬಾದ ಪಹಣಿ ಪತ್ರಿಕೆ (RTC) ಇದರ ವಿವರಣೆ, ಮಹತ್ವ ಮತ್ತು ಉಪಯೋಗಗಳು




**ಶ್ರೀ ಬಿ. ಗಂಗಾಧರ ಹೆಗ್ಡೆ**
ನಿವೃತ್ತ ಉಪತಹಶೀಲ್ದಾರರು
ಕಂದಾಯ ಸಲಹೆಗಾರರು
ಸ್ವಸ್ತಿಕಾ ಕನ್ಸಲ್ಟೆನ್ಸಿ ಸರ್ವಿಸಸ್


**(ಹಿಂದಿನ ಸಂಪುಟದಿಂದ ಮುಂದುವರಿದುದು)**

ಕಾಲಂ 12 ಮತ್ತು 13 ಗೇಣಿದಾರ, ಸಾಗುವಳಿ ವಿವರ ಹಾಗೂ ಭೂಮಿಯ ಉಪಯೋಗ ಮತ್ತು ಬೆಳೆಗಳ ವಿವರಗಳನ್ನೊಳಗೊಂಡಿರುತ್ತದೆ. ಕಾಲಂ ನಂಬ್ರ 12 ಮತ್ತು 13ರ ವಿವರಗಳನ್ನು ಕಾಲಂ 1ರಿಂದ 16ರವರೆಗೆ ಮರು ವಿಂಗಡಿಸಲಾಗಿದೆ.

12(1)ನೇ ಅಂಕಣದಲ್ಲಿ ಬೆಳೆಯ ವರ್ಷ ಮತ್ತು ಋತು ಅಂದರೆ ಮುಂಗಾರು, ಹಿಂಗಾರು, ಬೇಸಿಗೆ (ಕೊಳಕೆ) ಇದ್ದಲ್ಲಿ ಬರೆಯಲಾಗುತ್ತದೆ. ಈ ವಿವರಗಳನ್ನು ಗ್ರಾಮಕರಣಿಕರು ಜುಲೈ 1ರಿಂದ ಜೂನ್‌ವರೆಗೆ ಅಂದರೆ ಫಸ್ಲಿ ವರ್ಷಕ್ಕೆ 3 ಬಾರಿ ಬರೆಯಬೇಕು.

12(2)ರಲ್ಲಿ ವ್ಯವಸಾಯ ಮಾಡುವವರ ಹೆಸರು ಬರೆಯಬೇಕು. ಈಗಾಗಲೇ ಭೂ ನ್ಯಾಯ ಮಂಡಳಿ ಆದೇಶದ ಪ್ರಕಾರ ಅದಿಭೋಗದ ಹಕ್ಕು ಪಡೆದವರ ಹೆಸರು ಕಾಲಂ 9ರಲ್ಲಿ ದಾಖಲೆಯಾಗಿರುವುದರಿಂದ ಪುನಃ ಕಾಲಂ 12(2) ರಲ್ಲಿ ಹೆಸರು ನಮೂದಿಸುವ ಅಗತ್ಯವಿರುವುದಿಲ್ಲ. ಕಾಲಂ 9ರ ಕಬ್ಜೇದಾರರೇ ವಾಸ್ತವಿಕವಾಗಿ ಸಾಗುವಳಿದಾರರಾಗಿರುತ್ತಾರೆ. ಅಲ್ಲದೆ, ಈಗ ಜಮೀನು ಗೇಣಿಗೆ ನೀಡಲು ಅವಕಾಶ ಇರುವುದಿಲ್ಲ.

**ಕಾಲಂ12(3):** ಈ ಅಂಕಣದಲ್ಲಿ ಸಾಗುವಳಿ ಪದ್ಧತಿ ಅಥವಾ ವಿಧಾನವನ್ನು ಸೂಚಿಸಲಾಗಿದೆ. ಈ ಅಂಕಣದಲ್ಲಿ ಭೂ ಮಾಲಿಕ, ಗೇಣಿದಾರ, ಗೇಣಿ ಸಂದಾಯ ಮಾಡುವ ರೀತಿಯ ಬಗ್ಗೆ ವಿವರಿಸಲಾಗಿದೆ. ಇವುಗಳನ್ನು ಸಂಕೇತಗಳ ಮೂಲಕ ಬರೆಯಲಾಗಿದೆ.

**ಸಂಕೇತ (ಪಿ1) :**
ಮಾಲಿಕ (ಕಬ್ಜೆದಾರ)ನು ಸ್ವತಃ ಅಥವಾ ತನ್ನ ಕೈಯ್ಯಾರ ಅಥವಾ ಕೆಲವೊಮ್ಮೆ ಕೂಲಿ ಸಹಾಯದಿಂದ ಪಡೆದು ಸಾಗುವಳಿ ಮಾಡುವುದು.

**ಸಂಕೇತ (ಪಿ2) :**
ಅದಿಭೋಗದಾರ ಅಥವಾ ಅವನ ಏಜೆಂಟನ್ನು ಗೊತ್ತು ಮಾಡಿದ ಕೂಲಿಯವರಿಂದ ಪೂರ್ಣವಾಗಿ ಸಾಗುವಳಿ ಮಾಡಿದರೆ ಅಂದರೆ ಅವನ್ನು ಖುದ್ದಾಗಿ ಮತ್ತು ಕ್ರಮವಾಗಿ ಮೇಲ್ವಿಚಾರಣೆ ಮಾಡುವುದು.

**ಸಂಕೇತ (ಪಿ3) :**
ಗೇಣಿದಾರನೇ ಸಾಗುವಳಿ ಮಾಡಿ ಗೇಣಿಯನ್ನು ನಗದು ರೂಪದಲ್ಲಿ ಕೊಡುತ್ತಿರುವುದು.

**ಸಂಕೇತ (ಪಿ4) :**
ಗೇಣಿದಾರನೇ ಸಾಗುವಳಿ ಮಾಡಿ ಗೇಣಿಯನ್ನು ಬೆಳೆಯ ಭಾಗದ ರೂಪದಲ್ಲಿ ಕೊಡುವುದು.

**ಸಂಕೇತ (ಪಿ5) :**
ಗೇಣಿದಾರನಿಂದ ಸಾಗುವಳಿ ಅಥವಾ ಗೇಣಿದಾರನು ಸಾಗುವಳಿ ಮಾಡಿ ಗೇಣಿಯು ಉತ್ಪನ್ನದ ಗೊತ್ತು ಮಾಡಿದ ರೂಪದಲ್ಲಿ ಇರುವುದು.

**ಸಂಕೇತ (ಪಿ6) :**
ಗೇಣಿಯು ಕೆಲಸದ ಅಥವಾ ಮೇಲೆ ಹೇಳಿದ ಗೇಣಿಯ ಎಲ್ಲಾ ರೂಪಗಳ ಮಿಶ್ರಣಗಳನ್ನು ಹೊಂದಿರುವುದನ್ನು ಸಂಕೇತದ ಮೂಲಕ ಬರೆಯಲಾಗಿದೆ.

ಸೈನಿಕ / ನಾವಿಕನಾಗಿ ಕೆಲಸ ಮಾಡುತ್ತಿರುವ ಮುಂಚಿನ 3 ತಿಂಗಳಲ್ಲಿ ಗೇಣಿಗೆ ಕೊಟ್ಟಿದ್ದರೆ ಹೊರತು ಉಳಿದಂತೆ ಅವರ ಜಮೀನು ಯಾವುದೇ ಗೇಣಿಗಾರಿಕೆಗೆ ಒಳಪಡುವುದಿಲ್ಲ ಮತ್ತು ಮುಂದುವರಿಸು-ವಂತಿಲ್ಲ.

**ಕಾಲಂ 12(4) :** ಈ ಅಂಕಣದಲ್ಲಿ ಕಾಲಂ 3ರ ವಿಸ್ತೀರ್ಣದಲ್ಲಿ ಸಾಗುವಳಿ ಮಾಡಿದ ಬೇರೆ ಬೇರೆ ವಿಧಾನದಲ್ಲಿ ವಿವರಗಳೊಂದಿಗೆ ವಿಸ್ತೀರ್ಣಗಳಲ್ಲಿ ನಮೂದಿಸಬೇಕು.

**ಕಾಲಂ 12(5) :** ಗೇಣಿ: ಈ ಅಂಕಣದಲ್ಲಿ ಗೇಣಿದಾರನು ಸಂದಾಯ ಮಾಡಿದ ಗೇಣಿಯ ಪ್ರಮಾಣವನ್ನು ನಮೂದಿಸಲಾಗಿದೆ.
(ಉದಾ: 8 ಮುಡಿ ಅಕ್ಕಿ ...)

ಪಿ1 ಮತ್ತು ಪಿ2 ಸಂಕೇತಗಳು ಇರುವ ಜಮೀನಿಗೆ ಮಾಲಕನೇ ಸ್ವತಃ ಸಾಗುವಳಿ ಮಾಡುತ್ತಿರುವುದರಿಂದ ಯಾವ ಗೇಣಿ ನೀಡುವ / ಬರೆಯುವ ಅಗತ್ಯವಿಲ್ಲ.

**ಕಾಲಂ 13(6) :** ಈ ಕಾಲಂನಲ್ಲಿ ಜಮೀನಿನ ಒಟ್ಟು ವಿಸ್ತೀರ್ಣವನ್ನು ಭೂಮಿಯ ಉಪಯೋಗದಿಂದ A ರಿಂದ I ರವರೆಗೆ ಈ ಕೆಳಗಿನಂತೆ 9 ಸಂಕೇತಗಳ ಮೂಲಕ ವಿಭಾಗಿಸಿ ಬರೆಯಲಾಗಿದೆ.

**A. ಅರಣ್ಯ :** ರಾಜ್ಯ ಅರಣ್ಯ, ಸಣ್ಣ ಅರಣ್ಯ, ಉದ್ದೇಶಿತ ಅರಣ್ಯ, ಗ್ರಾಮ ಅರಣ್ಯ, ಜಿಲ್ಲಾ ಅರಣ್ಯ, ಮೀಸಲು ರಕ್ಷಿತಾರಣ್ಯ, ನಡು ತೋಪು ಇತ್ಯಾದಿ.

**B. ಸಾಗುವಳಿ ಮಾಡಲಾಗದ ಬಂಜರು :** ಬೆಟ್ಟ, ಮರುಭೂಮಿ ಇತ್ಯಾದಿ.

**C. ವ್ಯವಸಾಯೇತರ ಉದ್ದೇಶಕ್ಕೆ ಬಳಸಿದ ಭೂಮಿ :** ಕಟ್ಟಡವಿರುವ ಜಮೀನುಗಳು, ಹೊಳೆಗಳು, ಕಾಲುವೆ, ಕೊಳ, ಬಂಡೆಗಳು, ಭೂ ಪರಿವರ್ತನೆಗೊಂಡ ಜಮೀನು, ಅಂಗಳ ಇತ್ಯಾದಿ.

**D. ಸಾಗುವಳಿ ಮಾಡಬಹುದಾದ ಬೀಳು ಭೂಮಿ:** ಒಮ್ಮೆ ಸಾಗುವಳಿ ಮಾಡಿದ ನಂತರ 5 ವರ್ಷ ಪಡೀಲು (ಖಾಲಿ ಬಿಟ್ಟ) ಭೂಮಿ, ಕುರುಚಲು, ಗಿಡಗಂಟಿಗಳು ಇರುವ ಜಾಗ.

**E. ಶಾಶ್ವತ ಗೋಮಾಳಗಳು, ಇತರ ಮೇವು ಜಮೀನು :** ಸರಕಾರಿಯಾಗಲಿ ಖಾಸಗಿ ಯಾಗಲಿ ಎಲ್ಲಾ ಮೇವು ಜಮೀನುಗಳು, ಹುಲ್ಲುಗಾವಲು, ಗೋಮಾಳ ಇತ್ಯಾದಿ.

**F. ಸಂಕೀರ್ಣ ಮರಗಳು ಮತ್ತು ತೋಪುಗಳು** ತೋಟ ಎನ್ನುವುದರ ಪದ ಹೊರತು ಪಡಿಸಿರುವ ಸ್ಥಳ, ಬೆಟ್ಟ, ಬಿತ್ತನೆಯಾಗದ ಪ್ರದೇಶವನ್ನು ಹೊರತುಪಡಿಸಿದ ಸ್ಥಳ.

**G. ಪ್ರಸ್ತುತ ಬಂಜರು :** ಚಾಲ್ತಿ ವರ್ಷದಲ್ಲಿ ಬಿತ್ತನೆ ಮಾಡದ ಖಾಲಿ ಸ್ಥಳಗಳು.

**H. ಇತರ ಬಂಜರು :** ಬಡತನ, ನೀರಿನ ಅಭಾವ, ವಾಯುಗುಣ ಏರುಪೇರು, ರೋಗ, ಕಾಲುವೆ, ನದಿ, ಸಮಸ್ಯೆಗಳು, ಬೇಸಾಯದ ಲಾಭಕರವಲ್ಲದ ಸ್ವರೂಪಗಳಿಂದ ಸಾಗುವಳಿ ಮಾಡದ ಪ್ರದೇಶ.

**I. ಬಿತ್ತನೆ ಮಾಡಿದ ನಿವ್ವಳ ಪ್ರದೇಶ :** ಇದು ಬಿತ್ತನೆ ಮಾಡಿದ ಅಂದರೆ ಸಾಗುವಳಿ ಮಾಡಿದ ಜಮೀನು. ಒಂದೇ ವ್ಯವಸಾಯ ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಸಲ ಬಿತ್ತನೆ ಮಾಡಿದ ಪ್ರದೇಶವನ್ನು ಕಳೆದು ನಿವ್ವಳ ವಿಸ್ತೀರ್ಣ ಪ್ರದೇಶ ನಮೂದಿಸಬೇಕು. ವರ್ಷ ಪೂರ್ತಿ ಬೆಳೆಗಳಾದ ಮಾವು, ಹಣ್ಣುಗಳ ತೋಟ ಮತ್ತು ಇತರ ಅಡಕೆ, ತೆಂಗು ವಾರ್ಷಿಕ ಬೆಳೆಗಳ ವಿಸ್ತೀರ್ಣ ಸೇರುತ್ತವೆ.

**ಕಾಲಂ 13(7) :** ಕಾಲಂ 13(6) ಬಗ್ಗೆ ವಿಸ್ತೀರ್ಣಗಳನ್ನು ನಮೂದಿಸಬೇಕು.

**ಕಾಲಂ 13(8) :** ಕಾಲಂ 13(8)ರಲ್ಲಿ ಭೂಮಿಯ ವರ್ಗೀಕರಣ ಅಂದರೆ ತರಿ, ಖುಷ್ಕಿ, ಬಾಗಾಯ್ತು ವಿವರಗಳನ್ನು ನಮೂದಿಸುವುದು.

ತರಿ (Wet I, II, III)

ಖುಷ್ಕಿ (Dry Land)

ಬಾಗಾಯ್ತು (ಅಡಕೆ, ತೆಂಗು, ಮನೆ ಅಡಿ ಸ್ಥಳ ಇತ್ಯಾದಿ)

**ಕಾಲಂ 13(9) :** ಈ ಕಾಲಂನಲ್ಲಿ ಬೆಳೆಯಿಸಿ-ರುವ ಬೆಳೆಯ ಹೆಸರು ನಮೂದಿಸಿರಬೇಕು. ಉದಾ: ಭತ್ತ, ಜೋಳ, ರಾಗಿ, ಕಬ್ಬು, ತೆಂಗು, ಅಡಿಕೆ ಇತ್ಯಾದಿ.

**ಕಾಲಂ 13(10), ಕಾಲಂ 13(11) ಮತ್ತು ಕಾಲಂ 13(12) :** ಈ ಕಾಲಂನಲ್ಲಿ ಮಿಶ್ರ ಬೆಳೆ, ಶುದ್ಧ ಬೆಳೆಗಳನ್ನು ಬಿತ್ತಿದ ಪ್ರದೇಶವನ್ನು 10, 11ನೇ ಅಂಕಣದಲ್ಲಿ ನಮೂದಿಸುವುದು. ಇದರ ಒಟ್ಟು ವಿಸ್ತೀರ್ಣವನ್ನು 12ನೇ ಅಂಕಣದಲ್ಲಿ ದಾಖಲಿಸುವುದು.

**ಕಾಲಂ 13(13) :** ಈ ಕಾಲಂನಲ್ಲಿ ನೀರಾವರಿ ಮೂಲ ಅಂದರೆ ಮಳೆ, ಕಾಲುವೆ, ಕೊಳ, ಕುಂಟೆಗಳು, ಬಾವಿ, ಕುಡ್ಕಿ(ಏತ), ಕೊಳವೆಬಾವಿ, ಇತರೆ ಇದ್ದರೆ ಹೆಸರು ಬರೆದು ನಮೂದಿಸುವುದು.

**ಕಾಲಂ 13(14) :** ಎಕ್ರೆಗೆ ಉತ್ಪತ್ತಿ ಪ್ರಮಾಣವನ್ನು ಇಳುವರಿ ಆಧಾರದಲ್ಲಿ ನಮೂದಿಸಬೇಕು. ಉದಾ: ಒಂದು ಎಕ್ರೆಗೆ 10 ಕ್ವಿಂಟಾಲು ಭತ್ತ, ಇತ್ಯಾದಿ.

**ಕಾಲಂ 13(15) ಮತ್ತು ಕಾಲಂ 13(16) :** ಕಾಲಂ 11ರಲ್ಲಿ ದಾಖಲಿಸಲಾದ ಮಿಶ್ರ ಬೆಳೆಯ ವಿವರಗಳನ್ನು ಕಾಲಂ 15ರಲ್ಲಿ ಹಾಗೂ ಅದರ ವಿಸ್ತೀರ್ಣವನ್ನು ಕಾಲಂ 16ರಲ್ಲಿ ಬರೆಯಬೇಕು.

## ಮಂಗಳೂರು ನಗರದಲ್ಲಿ ಪ್ರೋಪರ್ಟಿ ಕಾರ್ಡ್ ಪಡೆಯಲು ನೀಡಬೇಕಾದ ಪೂರಕ ದಾಖಲೆಗಳ ವಿವರ

**ಇತರೆ ಜಮೀನುಗಳಿಗೆ ಸಂಬಂಧಿಸಿದಂತೆ :**

1) ನಿಗದಿತ ನಮೂನೆಯಲ್ಲಿ ಅರ್ಜಿ.
2) ಜಮೀನು ಹೊಂದಿದ ಬಗ್ಗೆ ದಸ್ತಾವೇಜುಗಳ ಪ್ರತಿ. (ಕ್ರಯ/ವಿಭಾಗಪತ್ರ/ವ್ಯವಸ್ಥಾಪತ್ರ/ದಾನಪತ್ರ/ವೀಲುನಾಮೆ ವಗೈರೆ)
3) ಭೂಪರಿವರ್ತನೆ ಆಗಿದ್ದಲ್ಲಿ ಆದೇಶ/ನಕ್ಷೆ ಪ್ರತಿ.
4) ಮಂಗಳೂರು ಮಹಾನಗರಪಾಲಿಕೆಯ ಖಾತಾ ಪ್ರತಿ.
5) ಖಾತೆ ಆಗಿಲ್ಲವಾದರೆ ದಾಖಲಿಸಿ ನೀಡುವುದು.
6) ಭೂಪರಿವರ್ತನೆ ಆಗಿಲ್ಲವಾದರೆ ಪಹಣಿ ಪತ್ರಿಕೆ ಲಗತ್ತಿಸುವುದು.
7) ಭಾಗಶ ಭೂ.ಪ ಭಾಗಶಃ ಕೃಷಿ ಜಮೀನಾಗಿದ್ದಲ್ಲಿ ಪಹಣಿ ಪತ್ರಿಕೆ ಮತ್ತು ಖಾತಾ ಪ್ರತಿ ಲಗತ್ತಿಸುವುದು.
8) ಪ್ರಸಕ್ತ ಸಾಲಿನ ತೆರಿಗೆ ಪಾವತಿ ರಶೀದಿ.
9) ನ್ಯಾಯಾಲಯದಲ್ಲಿ ಪ್ರಕರಣ ಇದ್ದರೆ, ದಾಖಲೆಗಳ ಪ್ರತಿ ಪಡೆಯುವುದು.
10) ಋಣ/ಸಾಲ ವಗೈರೆ ಇದ್ದರೆ, ವಿವರಣೆ/ದಾಖಲೆಗಳನ್ನು ಪಡೆಯುವುದು. (ಕ್ರಮ ಸಂಖ್ಯೆ 9 ಮತ್ತು 10ನ್ನು ಅಗತ್ಯವಿದ್ದಲ್ಲಿ ಅರ್ಜಿಯೊಂದಿಗೆ ಲಗ್ತೀಕರಿಸುವುದು).

**ಫ್ಲಾಟ್‌ಗೆ (ಅಪಾರ್ಟ್‌ಮೆಂಟ್) ಸಂಬಂಧಿಸಿದಂತೆ :**

1) ಜಮೀನು ಖರೀದಿಯ ಯಾ ಹೊಂದಿದ ಬಗ್ಗೆ ಮೂಲ ದಾಖಲೆಗಳ ಪ್ರತಿ.
2) ಮೂಲ ಭೂಪರಿವರ್ತನೆ ಆದೇಶ/ನಕ್ಷೆ ಪ್ರತಿ.
3) ಡೀಡ್ ಆಫ್ ಡಿಕ್ಲರೇಷನ್ ಪ್ರತಿ.
4) ಕಟ್ಟಡ ರಚನೆ ಪರವಾನಿಗೆ ಪ್ರತಿ.
5) ಕಟ್ಟಡ ಪ್ರವೇಶ ಅನುಮತಿ ಪತ್ರದ ಪ್ರತಿ.
6) ಫ್ಲಾಟ್ ಖರೀದಿಸಿದ ಕ್ರಯಪತ್ರದ ಪ್ರತಿ.
7) ಖಾತೆ ಪ್ರತಿ.
8) ತೆರಿಗೆ ಪಾವತಿ ರಶೀದಿ ಪ್ರತಿ.



# ಮ್ಯುಟೇಶನ್ ಪೂರ್ವ ನಕ್ಷೆಯ (11ಇ) ಅವಶ್ಯಕತೆ ಮತ್ತು ಪಡೆಯುವ ವಿಧಾನ




**ಶ್ರೀ ಪರಮೇಶ್ವರ ಮೊಯ್ಲಿ**

ನಿವೃತ್ತ ಉಪತಹಶೀಲ್ದಾರರು

ಕಂದಾಯ ಸಲಹೆಗಾರರು

ಸ್ವಸ್ತಿಕಾ ಕನ್ಸಲ್ಟೆನ್ಸಿ ಸರ್ವಿಸಸ್


ಕರ್ನಾಟಕ ಭೂ ಕಂದಾಯ ಕಾಯ್ದೆಯ 128 ಮತ್ತು 131(ಸಿ) ಪ್ರಕರಣ ಮತ್ತು ಇದಕ್ಕೆ ಸಂಬಂಧಿಸಿದ ವಿಷಯಗಳಿಗೆ ಸರಕಾರವು ಮಾಡಿರುವ ತಿದ್ದುಪಡಿ ಮತ್ತು ದಿನಾಂಕ 19–9–2006ರಂದು ಹೊರಡಿಸಿದ ಅಧಿಸೂಚನೆಯಂತೆ ಭಾಗಶಃ ಜಮೀನಿನ ಪ್ರತಿಯೊಂದು ವಹಿವಾಟು ನೋಂದಣಿ ಸಂದರ್ಭದಲ್ಲಿ ಅಂದರೆ ಕ್ರಯ, ವಿಭಾಗ, ದಾನ, ಭೂ ಮಂಜೂರಾತಿ, ಭೂ ಸ್ವಾಧೀನತೆ, ಇತ್ಯಾದಿ ದಸ್ತಾವೇಜಿನೊಂದಿಗೆ ಮೋಜಣಿ ದಾರರಿಂದ ಮೋಜಣಿ ತಂತ್ರಾಂಶದಿಂದ ತಯಾರಿಸಲ್ಪಟ್ಟ ಮ್ಯುಟೇಶನ್ ಪೂರ್ವ ನಕ್ಷೆ ಅಂದರೆ 11ಇ ಸಲ್ಲಿಸುವುದು ಕಡ್ಡಾಯ ಗೊಳಿಸಲಾಗಿದೆ. ಇತ್ತೀಚಿಗಿನ ಹೊಸ ಭೂ ಪರಿವರ್ತನೆಯ ಪ್ರಕ್ರಿಯೆಯಲ್ಲಿಯೂ 11ಇ ಕಡ್ಡಾಯ ಗೊಳಿಸಲಾಗಿದೆ.

**ಮ್ಯುಟೇಶನ್ ಪೂರ್ವ ನಕ್ಷೆಯ ಅವಶ್ಯಕತೆ :**

ಜಮೀನಿನ ತಕರಾರು ತಡೆಗಟ್ಟುವ ಮೂಲ ಉದ್ದೇಶದಿಂದ ಮ್ಯುಟೇಶನ್ ಪೂರ್ವ ನಕ್ಷೆ ಅಂದರೆ 11ಇ ನಕ್ಷೆ ತಯಾರಿಸುವ ಕ್ರಮವನ್ನು ಜಾರಿಗೆ ತರಲಾಗಿದೆ. ಮೋಜಣಿದಾರರು 11ಇ ನಕ್ಷೆಯ ತಯಾರಿ ಬಗ್ಗೆ ಸಂಬಂಧಪಟ್ಟ ಜಮೀನಿನ ಎಲ್ಲಾ ಹಕ್ಕುದಾರರಿಗೆ ನೋಟೀಸು ನೀಡಿ ಪರಾಭಾರೆ ಮಾಡುವ ಮತ್ತು ಜಮೀನು ಪಡಕೊಳ್ಳುವವರ ಸಮಕ್ಷಮ ಅಳತೆ ಮಾಡಿ ಗಡಿಯನ್ನು ಗುರುತಿಸಿ ಅದರಂತೆ ನಕ್ಷೆ ತಯಾರಿಸುವುದರಿಂದ ಯಾವುದೇ ಜಮೀನಿನ ತಕರಾರು ಉಂಟಾಗುವ ಪ್ರಮೇಯವಿರುವುದಿಲ್ಲ. ಉಪನೋಂದಣಾಧಿಕಾರಿ ಕಛೇರಿಯಲ್ಲಿ ಈ ಪರಾಭಾರೆ ವ್ಯವಹರಣೆಗಳು ಆದಂತೆ ಭೂಮಿ ತಂತ್ರಾಂಶದಲ್ಲಿ ಕಂದಾಯ ಇಲಾಖೆಯ ಪಹಣಿ ಪತ್ರಿಕೆಗಳಲ್ಲಿ ಈ ವ್ಯವಹರಣೆಯನ್ನು ಕಾಲೋಚಿತಗೊಳಿಸಲಾಗುತ್ತದೆ. ಬಳಿಕ ಮೋಜಣಿ ಇಲಾಖೆಯಲ್ಲಿ ಸಂಬಂಧಪಟ್ಟ ಜಮೀನಿನ ಸರ್ವೆನಂಬ್ರ ಮತ್ತು ವಿಸ್ತೀರ್ಣವು ಪೋಡಿ ದುರಸ್ತಿಯಾಗಿ ಆಕಾರಬಂದ್, ಗ್ರಾಮದ ಎಫ್.ಎಮ್.ಬಿ ನಕಾಶೆಗಳಲ್ಲಿ ಕಾಲೋಚಿತಗೊಳಿಸಲಾಗುತ್ತದೆ. ಇದನ್ನು ಭೂಮಿ ತಂತ್ರಾಂಶದಲ್ಲಿ "ಸಂಯೋಜಿತ ಮ್ಯುಟೇಶನ್ ವ್ಯವಸ್ಥೆ" ಎನ್ನುತ್ತಾರೆ.

ಪೂರ್ಣ ಸರ್ವೆನಂಬ್ರ / ಸಬ್‌ಡಿವಿಷನ್ ವಿಸ್ತೀರ್ಣವು ಹೊಸ ಮಾಲೀಕರಿಗೆ ವರ್ಗಾವಣೆಗೊಳ್ಳುವ ಸಂದರ್ಭದಲ್ಲಿ 11ಇ ನಕ್ಷೆಗೆ ಅರ್ಜಿಯನ್ನು ಸಲ್ಲಿಸುವ ಅಗತ್ಯತೆ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಮೋಜಣಿ ಇಲಾಖೆಯ ಎಫ್.ಎಮ್.ಬಿ ದಾಖಲೆಯಲ್ಲಿ ಇರುವ ನಕ್ಷೆಯ ದೃಢೀಕೃತ ನಕಲು ಪಡೆದು ವ್ಯವಹರಣೆಗೆ ಬಳಸಬಹುದಾಗಿದೆ.

**11ಇ ನಕ್ಷೆ ತಯಾರಿಸುವ ಮತ್ತು ನೀಡುವ ಕ್ರಮ :**

ಆಕಾರಬಂದ್ ದಾಖಲೆಯಂತೆ 11ಇ ನಕ್ಷೆ ಅಪೇಕ್ಷಿಸಿದ ಸರ್ವೆನಂಬ್ರ ಮತ್ತು ವಿಸ್ತೀರ್ಣವು ಅದೇ ಸರ್ವೆನಂಬ್ರದ ಪಹಣಿಯ / ಪೈಕಿ ಪಹಣಿಗಳ ಒಟ್ಟು ವಿಸ್ತೀರ್ಣಕ್ಕೆ ತಾಳೆ ಇದ್ದು ಭಾಗಶಃ ವಿಸ್ತೀರ್ಣವನ್ನು ಹೊಸ ಮಾಲೀಕರಿಗೆ ವರ್ಗಾಯಿಸುತ್ತಿದ್ದರೆ ಅಂತಹ ಜಮೀನಿಗೆ 11ಇ ನಕ್ಷೆಯ ಅಗತ್ಯವಿರುತ್ತದೆ. ಇಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಜಮೀನಿನ ಪಹಣಿ ಪತ್ರಿಕೆ, ಗುರುತಿನ ದಾಖಲೆ, ಪರಾಭಾರೆ ಮಾಡುವವರ ಮತ್ತು ಪಡೆದುಕೊಳ್ಳುವವರ ಹೆಸರು, ವಿಳಾಸದೊಂದಿಗೆ ಅಪ್ಲಿಕೇಶನ್ ಕಿಯೋಸ್ಕ್ (ಅಟಲ್ ಜೀ ಜನಸ್ನೇಹಿ ಕೇಂದ್ರ) ನಲ್ಲಿ ನಿಗದಿತ ಶುಲ್ಕ ಪಾವತಿಯೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು.

ಅರ್ಜಿ ಕಿಯೋಸ್ಕ ಕೇಂದ್ರದಲ್ಲಿ ಸ್ವೀಕರಿಸಿದ ಅರ್ಜಿಯು ಮೋಜಣಿ ತಂತ್ರಾಂಶದ ಮೂಲಕ ವಿಷಯ ನಿರ್ವಾಹಕರು ಲಾಗಿನ್‌ಗೆ ವರ್ಗಾಯಿಸಲ್ಪಡುತ್ತಿದ್ದು ಅಲ್ಲಿ ಜಮೀನು ಖಾಸಗಿಯೇ/ ಭೂ ನ್ಯಾಯಮಂಡಳಿಯೇ / ದರ್ಖಾಸ್ತು ಎನ್ನುವ ಬಗ್ಗೆ ಪರಿಶೀಲಿಸಿ ಆಕಾರಬಂದ್ ಮತ್ತು ಪಹಣಿಯ ವಿವರಗಳನ್ನು ದಾಖಲಿಸುತ್ತಾರೆ. ಪಹಣಿಗೂ ಆಕಾರ ಬಂದ್‌ಗೂ ತಾಳೆ ಇದ್ದ ಪ್ರಕರಣಗಳನ್ನು ಪರ್ಯಾವೇಕ್ಷಕರು ಈ ಕಡತವನ್ನು ತಂತ್ರಾಂಶದ ಮೂಲಕ ಸಂಬಂಧಪಟ್ಟ ಮೋಜಣಿದಾರರಿಗೆ ಹಸ್ತಾಂತರಿಸುತ್ತಾರೆ. ಒಂದು ವೇಳೆ ಸದ್ರಿ ಸರ್ವೆನಂಬ್ರದ ಆಕಾರಬಂದ್ ವಿಸ್ತೀರ್ಣಕ್ಕೆ ಪಹಣಿ ವಿಸ್ತೀರ್ಣ ತಾಳೆಯಾಗದೇ ಇದ್ದಲ್ಲಿ ಇಂತಹ ಪ್ರಕರಣಗಳನ್ನು ತಾಲೂಕು ಆರ್.ಆರ್.ಟಿ ಶಾಖೆಗೆ ವರ್ಗಾಯಿಸಬೇಕಾಗಿರುತ್ತದೆ. ತಾಲೂಕು ಕಛೇರಿಯಲ್ಲಿ ಗ್ರಾಮಕರಣಿಕರು, ಕಂದಾಯ ನಿರೀಕ್ಷಕರು ಈ ಜಮೀನಿಗೆ ಎಲ್ಲಾ ಪೈಕಿ ಪಹಣಿ ಪತ್ರಿಕೆಗಳ ವಿಸ್ತೀರ್ಣ ಕ್ರೋಢೀಕರಿಸಿದ ಬಳಿಕ ಆಕಾರಬಂದ್ ದಾಖಲೆಯಲ್ಲಿ ಇರುವ ವಿಸ್ತೀರ್ಣಕ್ಕೆ ಹೆಚ್ಚು ಅಥವಾ ಕಡಿಮೆಯಾಗಲು ಕಾರಣವನ್ನು ಕಂಡುಹಿಡಿದು ಇದನ್ನು ಸರಿಪಡಿಸಲು ತಿದ್ದುಪಡಿ / ದುರಸ್ತಿ ಬಗ್ಗೆ ಕಡತ ತಯಾರಿಸಿ ಸಹಾಯಕ ಕಮೀಷನರ ದುರಸ್ತಿ ಆದೇಶ ಪಡೆಯಬೇಕಾಗಿರುತ್ತದೆ. ಸಂಬಂಧಪಟ್ಟ ಮೋಜಣಿದಾರರು ಮೋಜಣಿಗೆ ಜಮೀನಿನ ಪಹಣಿ ಪತ್ರಿಕೆಯಲ್ಲಿ ದಾಖಲಿರುವ ಎಲ್ಲಾ ಖಾತೆದಾರರಿಗೆ ಅಳತೆಗೆ ಬರುವ ದಿನಾಂಕ ಗೊತ್ತುಪಡಿಸಿದ ಸದ್ರಿ ಸ್ಥಳದಲ್ಲಿ ಹಾಜರಿರುವಂತೆ ನೋಟೀಸು ನೀಡಿ ಅಳತೆ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಖಾತಾದಾರರು ಗ್ರಾಮದಲ್ಲಿ ವಾಸವಿಲ್ಲದಿದ್ದರೂ ವಿಳಾಸ ಪಡೆದು ಅಂಚೆಯ ಮೂಲಕ ಕಳುಹಿಸಬೇಕಾಗಿರುತ್ತದೆ. ಅಳತೆ ಸಮಯದಲ್ಲಿ ಹಾಜರಿದ್ದ ಹಕ್ಕುದಾರರ ಸಮಕ್ಷಮ ಅಥವಾ ಗ್ರಾಮಸ್ಥರ ಸಮಕ್ಷಮ ಅಳತೆ ಮಾಡಿ ಹಾಜರಾದ / ಹಾಜರಾಗಲು ನೋಟೀಸು ನೀಡಿದವರ ವಿವರವನ್ನು ಮಹಜರಿನಲ್ಲಿ ನಮೂದಿಸಬೇಕು. ಜಮೀನಿನ ಅಳತೆ ಕಾರ್ಯ ನಡೆಸಿದ ಬಳಿಕ ಈ ವಹಿವಾಟಿನ ಪ್ರಕಾರ ಹಾಲಿ ಇರುವ ಮಾಲಿಕರಿಗೆ ಪ್ರಾಪ್ತವಾಗದ ಪ್ರದೇಶಗಳಿಗೆ ಪ್ರತ್ಯೇಕ ಬ್ಲಾಕ್ ನಂಬ್ರಗಳನ್ನು ಕೊಟ್ಟು ಗಡಿ ಗುರುತಿಸಿ ನಕ್ಷೆಯನ್ನು ತಯಾರಿಸಬೇಕು. 11ಇ ನಕ್ಷೆಯಲ್ಲಿ ವಹಿವಾಟಿಗೆ ಒಳಪಡುವ ವಿಸ್ತೀರ್ಣದ ಗಡಿಯನ್ನು ಕೆಂಪು ಶಾಯಿಯಲ್ಲಿ ದಾಖಲಿಸಲಾಗುತ್ತದೆ. ನಕಾಶೆಗೆ ಈಗಿನ ಮಾಲೀಕರು ಮತ್ತು ಹೊಸ ಮಾಲಿಕರಿಂದ ಸಹಿ ಮಾಡಿಸಿ ಮೋಜಣಿದಾರರು ದಾಖಲೆಗಳನ್ನು ತಯಾರಿಸಿ ಮೋಜಣಿ ತಂತ್ರಾಂಶಕ್ಕೆ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುತ್ತಾರೆ. ಈಗಾಗಲೇ ಪೋಡಿ ದುರಸ್ತಿಯಾಗಿರುವ ಸರ್ವೆ ನಂಬರಿನ ಅರ್ಜಿಗಳಲ್ಲಿ 11ಇ ನಕ್ಷೆಯನ್ನು ಮೋಜಣಿ ಪರ್ಯಾವೇಕ್ಷಕರು ಅನುಮೋದನೆ ಮಾಡಿದ ಬಳಿಕ ನಾಡಕಚೇರಿ ಆಪರೇಟರ್ ಲಾಗಿನ್‌ಗೆ ಹೋಗುತ್ತದೆ. ಪ್ಲಾಟಿಂಗ್ ಆಗದ ಸರ್ವೆನಂಬರಿನಲ್ಲಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಂದ ದೃಢೀಕರಿಸಿ ಇವನ್ನು ತಂತ್ರಾಂಶದಲ್ಲಿ ಅಂಗೀಕರಿಸಿ ಆನ್‌ಲೈನ್ ಮೂಲಕ ಭೂಮಿ ಸರ್ವರ್‌ಗೆ ಕಳುಹಿಸುತ್ತಾರೆ. ಭೂಮಿಯಲ್ಲಿ ಪಹಣಿ ದುರಸ್ತಿಯಾದ ನಂತರವೇ ಮ್ಯುಟೇಶನ್ ಪೂರ್ವ ನಕ್ಷೆ (11ಇ ನಕ್ಷೆ) ಅರ್ಜಿದಾರರಿಗೆ ವಿತರಿಸಲಾಗುತ್ತದೆ. ಈ ನಕ್ಷೆಗಳನ್ನು ಸಿಬ್ಬಂದಿ / ಅಧಿಕಾರಿಗಳು ಗಣಕ ವ್ಯವಸ್ಥೆಯಲ್ಲಿ Bio-Login ಬಳಸಿ ಅಂಗೀಕರಿಸಿರುವುದರಿಂದ ಭೌತಿಕ ಸಹಿ ಇರುವುದಿಲ್ಲ. ಪ್ರತಿಯೊಂದು 11ಇ ನಕ್ಷೆಯು ಅದು ಯಾವ ದಿನಾಂಕದವರೆಗೆ ಬಳಸಬಹುದು ಎಂಬುದಾಗಿ ನಮೂದಿಸಲಾಗಿರುತ್ತದೆ. ಸದ್ರಿ ಅವಧಿಯೊಳಗೆ ನೋಂದಣಿಯಾಗದಿದ್ದಲ್ಲಿ valid date ಮುಗಿದ ನಂತರದಲ್ಲಿ ನಿಗದಿತ ಶುಲ್ಕ ಪಾವತಿಸಿ ಮುಂದಿನ 6 ತಿಂಗಳಿಗೆ ನವೀಕರಿಸಿಕೊಳ್ಳಬಹುದಾಗಿದೆ. ಒಂದು ವರ್ಷದ ನಂತರ ಅನೂರ್ಜಿತಗೊಳ್ಳುತ್ತದೆ.

ಉಭಯಪಾರ್ಟಿಯವರು ಈ 11ಇ ನಕ್ಷೆ ಪಡೆದ ಬಳಿಕ ಇತರ ದಾಖಲೆಯೊಂದಿಗೆ ಸಂಬಂಧಪಟ್ಟ ಉಪನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಾಯಿಸಬೇಕಾಗಿರುತ್ತದೆ. ಈ ವಹಿವಾಟನ್ನು ಕಾವೇರಿ ತಂತ್ರಾಂಶದಿಂದ ತಾಲೂಕು ಕಛೇರಿಗೆ ಭೂಮಿ ತಂತ್ರಾಂಶಕ್ಕೆ ಮುಂದಿನ ಕ್ರಮಕ್ಕೆ ರವಾನೆಯಾಗುತ್ತದೆ. ತಾಲೂಕು ಕಛೇರಿ, ಭೂಮಿ ಕೇಂದ್ರದಲ್ಲಿ ಈ ವಹಿವಾಟು ಮ್ಯುಟೇಶನ್ ಪ್ರಕ್ರಿಯೆಗೊಳಪಟ್ಟು ರಾಜಸ್ವ ನಿರೀಕ್ಷಕರು ಮ್ಯುಟೇಶನ್ ಅಂಗೀಕರಿಸಿದ ಬಳಿಕ ಈ ಕಡತವು ಮೋಜಣಿ ಮೇಲ್ವಿಚಾರಕರಿಗೆ ರವಾನೆಯಾಗುತ್ತದೆ. ಮೋಜಣಿ ಮೇಲ್ವಿಚಾರಕರು ಮ್ಯುಟೇಶನ್ ಪೂರ್ವ ನಕ್ಷೆಯಲ್ಲಿ ನಮೂದಿಸಿ ಬ್ಲಾಕ್‌ಗಳನ್ನು ಪರಿಶೀಲಿಸಿ ಹೊಸ ಸರ್ವೆನಂಬ್ರ, ಹಿಸ್ಸಾ ನಂಬ್ರ, ವಿಸ್ತೀರ್ಣದ ಆಕಾರಬಂದ್ ಮತ್ತು ನಮೂನೆ 10ನ್ನು ತಯಾರಿಸುತ್ತಾರೆ. ಮೂಲ ದಾಖಲೆಯಲ್ಲಿ ಇಂದೀಕರಿಸಿ ಇದರ ಪ್ರತಿಯನ್ನು ಪುನಃ ತಾಲೂಕು ಭೂಮಿ ಕೇಂದ್ರಕ್ಕೆ ವರ್ಗಾಯಿಸಲಾಗುತ್ತದೆ. ಭೂಮಿ ಕೇಂದ್ರದಲ್ಲಿ ಈ ದುರಸ್ತಿಯಾದ ವಿವರವನ್ನು ದಾಖಲಿಸಿದ ಬಳಿಕ ಕಂದಾಯ ನಿರೀಕ್ಷಕರ ದೃಢೀಕರಣ ಪಡೆದು ಮ್ಯುಟೇಶನ್ ವಿವರ ಭೂಮಿ ಗಣಕತಂತ್ರದಲ್ಲಿ ಅಳವಡಿಸಲಾಗುತ್ತದೆ. ಬಳಿಕ ಅಂತಹ ವಹಿವಾಟಿನಲ್ಲಿ ಒಳಗೊಂಡ ಎಲ್ಲಾ ಮಾಲೀಕರಿಗೆ ಹೊಸ ಸರ್ವೆನಂಬ್ರದಿಂದ ಪ್ರತ್ಯೇಕ ಪಹಣಿಗಳು ಮತ್ತು ನಕ್ಷೆಗಳು ಲಭ್ಯವಾಗುತ್ತದೆ.

ಭೂ ಸುಧಾರಣೆ ಕಾಯ್ದೆಯಡಿ ಮಂಜೂರಾದ ಜಮೀನುಗಳಿಗೆ ಈ ಜಮೀನು ಆಕಾರಬಂದ್ ವಿಸ್ತೀರ್ಣಕ್ಕೆ ತಾಳೆಯಾದಲ್ಲಿ ಸರಕಾರಿ ಭೂಮಾಪಕರು ಅಳತೆ ಮಾಡಿ ಮೇಲೆ ನಮೂದಿಸಿದಂತೆ 11ಇ ನಕ್ಷೆ ತಯಾರಿಸುತ್ತಾರೆ. ಆದರೆ ಭೂ ಮಂಜೂರಾತಿ ಪ್ರಕರಣಗಳಲ್ಲಿ ಈ ಜಮೀನುಗಳು ಆಕಾರಬಂದ್ ವಿಸ್ತೀರ್ಣಕ್ಕೆ ಪಹಣಿ ವಿಸ್ತೀರ್ಣ ತಾಳೆಯಾಗಬೇಕಾಗಿರುವುದಲ್ಲದೆ 1 ರಿಂದ 5ನೇ ನಮೂನೆಯನ್ನು ಗ್ರಾಮಕರಣಿಕರು ತಯಾರಿಸಿದ ಬಳಿಕ ಕಂದಾಯ ನಿರೀಕ್ಷಕರು ತಹಶೀಲ್ದಾರರು, ಸಹಾಯಕ ಕಮೀಶನರು ಮತ್ತು ಡಿ.ಡಿ.ಎಲ್.ಆರ್‌ರವರಿಂದ ದೃಢೀಕರಿಸಿದ ಬಳಿಕವೇ ಭೂ ಮಾಪಕರಿಂದ ಅಳತೆಗೆ ಕ್ರಮ ಪ್ರಾರಂಭಿಸಲಾಗುತ್ತದೆ.

**ಮ್ಯುಟೇಶನ್ ಪೂರ್ವ ನಕ್ಷೆ (11ಇ ನಕ್ಷೆ) ತಯಾರಿಸುವಲ್ಲಿ ಸಮಸ್ಯೆಗಳು:**

ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಭೂ ಸುಧಾರಣೆಯಂತೆ ಜಮೀನು ಮಂಜೂರಾಗಿದ್ದು ಎಲ್ಲಾ ಅನುಭೋಗದಾರರಿಗೆ ಮೂಲ ಪಹಣಿಯಿಂದ ಕಳಚಿ ಹೊಸ ಪೈಕಿ ಪಹಣಿ ಪತ್ರಿಕೆಗಳನ್ನು ನೀಡಲಾಗಿದೆ. ಹೊಸ ಪಹಣಿಯನ್ನು ನೀಡುವಾಗ ಅನೇಕ ತಪಾವತಿಗಳಾಗಿರುವುದರಿಂದ ಆಕಾರಬಂದ್ ವಿಸ್ತೀರ್ಣಕ್ಕೆ ಪಹಣಿ ಒಟ್ಟು ವಿಸ್ತೀರ್ಣ ತಾಳೆಯಾಗುವುದು ಕಂಡುಬರುವುದಿಲ್ಲ. ಹೊಸ ಖಾತಾ ಬದಲಾವಣೆಯಾಗುವ ಸಮಯದಲ್ಲಿ ಮೂಲ ಪಹಣಿಯಿಂದ ಒಂದೇ ವ್ಯಕ್ತಿಗೆ 2 ಬಾರಿ ಖಾತಾ ಬದಲಾವಣೆ ದಾಖಲಿಸಿರುವುದು, ಮೂಲ ಪಹಣಿಯಲ್ಲಿ ವಿಸ್ತೀರ್ಣ ಕಳಚದೆ ಹೊಸ ಪಹಣಿಯನ್ನು ಸೃಜಿಸಿರುವುದು, ಖಾತಾ ಬದಲಾವಣೆ ಸಮಯದಲ್ಲಿ ಖಾತಾ ಬದಲಾವಣೆ ವಿಸ್ತೀರ್ಣಕ್ಕೆ ಅನುಗುಣವಾಗಿ ಕಳಚದೇ ಹೆಚ್ಚು ಹಾಗೂ ಕಡಿಮೆ ವಿಸ್ತೀರ್ಣ ಕಳಚುವುದು ಹಾಗೂ ಇನ್ನಿತರ ಕಾರಣಗಳಿಂದ ಈ ಎರಡೂ ದಾಖಲೆಗಳ ವಿಸ್ತೀರ್ಣ ತಾಳೆಯಾಗುವುದು ಕಂಡುಬರುವುದಿಲ್ಲ. ಈ ಎರಡೂ ದಾಖಲೆಗಳ ವಿಸ್ತೀರ್ಣ ತಾಳೆಯಾಗದೆ ಮೋಜಣಿ ಕಾರ್ಯ ನಡೆಸಲು ಅವಕಾಶ ಇರುವುದಿಲ್ಲ. ಕೆಲವೊಂದು ಬಾರಿ ಇಲಾಖೆಯ ದಾಖಲೆಗಳು ನಾದುರಸ್ತಿಯಿಂದ ಲಭ್ಯವಿಲ್ಲದಿರುವುದರಿಂದ ಕೂಡಾ ದಾಖಲೆಯಲ್ಲಿ ತಾಳೆ ಮಾಡುವುದು ಅಸಾಧ್ಯವಿರುತ್ತದೆ. ಹೀಗೆ ಇಲಾಖೆಯು ಮಾಡಿದ ತಪಾವತಿಯಿಂದ ಭೂ ಹಿಡುವಳಿದಾರರು ವ್ಯರ್ಥ ಅಲೆದಾಟ ನಡೆಸುವುದನ್ನು ಕಾಣಬಹುದು.

ಮಂಗಳೂರು ನಗರದಲ್ಲಿ ಭೂ ಪರಿವರ್ತನೆಯ ಜಮೀನಿಗೆ ಮಂಗಳೂರು ಮಹಾನಗರ ಪಾಲಿಕೆಯಿಂದ ಖಾತಾ ಹೊಂದಿರುತ್ತಾರೆ. ಆರ್.ಟಿ.ಸಿ ಮೂಲ ಮಾರಾಟಗಾರರ ಹೆಸರಲ್ಲೇ ಇದ್ದು, ಕೆಲವೊಂದು ಸಂದರ್ಭದಲ್ಲಿ 4 ಅಥವಾ 5 ಬಾರಿ ಪರಾಭಾರೆ ಆಗಿರುತ್ತದೆ. ಇಂತಹ ಸಂದರ್ಭದಲ್ಲಿ ಆರ್.ಟಿ.ಸಿ ಮತ್ತು ಆಕಾರಬಂದ್ ವಿಸ್ತೀರ್ಣ ತಾಳೆ ಮಾಡುವುದು ತುಂಬಾ ಕಷ್ಟದ ಕೆಲಸ.

ಕೆಲವು ಪ್ರಕರಣಗಳಲ್ಲಿ ಆಕಾರಬಂದ್ ದಾಖಲೆಯಲ್ಲಿ ಪೋಡಿ ಪ್ರಕ್ರಿಯೆಯಾಗಿ ನಕ್ಷೆ, ಆಕಾರಬಂದ್ ದುರಸ್ತಿಯಾಗಿದ್ದರೂ ಪಹಣಿ ಪತ್ರಿಕೆಗಳು ಕಾಲೋಚಿತಗೊಂಡಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಮೊದಲಿನ ಪೋಡಿ ಪ್ರಕ್ರಿಯೆಯನ್ನು ಪಹಣಿಯಲ್ಲಿ ಇಂದೀಕರಿಸಿದ ಬಳಿಕವೇ 11ಇ ನಕ್ಷೆಯ ತಯಾರಿ ಪ್ರಕ್ರಿಯೆಯಾಗಬೇಕಾಗಿರುತ್ತದೆ. ಹೀಗೆ 11ಇ ನಕ್ಷೆಯು ಕಂದಾಯ ಇಲಾಖೆಯ ಮತ್ತು ಭೂದಾಖಲೆ ಇಲಾಖೆಯ ಜಂಟಿ ಸಹಕಾರದಿಂದ ಸಾಧ್ಯವಾಗುವುದು.

ಕಂದಾಯ ಇಲಾಖೆಯ ಗ್ರಾಮಕರಣಿಕರು ಕಂದಾಯ ನಿರೀಕ್ಷಕರು ಈ ಬಗ್ಗೆ ಕೈಬರಹದ ಪಹಣಿ ಪತ್ರಿಕೆ, ಮ್ಯುಟೇಶನ್ ಆದೇಶ ಹಾಗೂ ಇತರ ದಾಖಲೆಯನ್ನು ಪಡೆದು, ಮೇಲಾಧಿಕಾರಿಗಳ ಆದೇಶ ಪಡೆದು ಪಹಣಿಗಳನ್ನು ಸರಿಪಡಿಸಬಹುದಾಗಿದೆ. 2000–01ನೇ ಸಾಲಿನಿಂದ ಗಣಕೀಕರಣ ಪಹಣಿ ಪ್ರಾರಂಭಗೊಂಡಿದ್ದು ಈಗಲೂ ಅಂದರೆ 18 ವರ್ಷವಾದರೂ ಪಹಣಿ ದಾಖಲೆಗಳಲ್ಲಿ ತಿದ್ದುಪಡಿಯಿರುವುದು ವಿಪರ್ಯಾಸ. ಈ ಬಗ್ಗೆ ಸೂಕ್ತ ತಿಳುವಳಿಕೆ, ಕಾಲಾವಕಾಶ, ಮನೋಬಲದ ಅವಶ್ಯಕತೆ ಇದೆ.



**Dr. Noothan Rao**
Graphologist, Counselor
Write Strokes With Right Thoughts ™
(A Research Center for holistic healing)
(Lalbagh West Gate, Basavanagudi
Bengaluru. PH: 9980012485,
Email: noothan.rao@gmail.com)

**Introduction:**

Dr. Noothan Rao Counselor, Graphologist at "Write Strokes with Right Thoughts"™, Research Center for Holistic Healing is actively been involved in Grapho-Therapy Research in Medical field at St. Johns Medical College Hospital, Bengaluru and other clinics/hospitals, old age homes/ orphanages.

She has Double Doctorate and Professorship honor in Astrology from Indian Institute of Oriental Heritage, Kolkata. Also Honorary Doctorate in Advanced Graphology – Specialization in "Health in Handwriting through altered strokes" from Indian Virtual University for Peace and Education. She is been faculty of many prominent institutes.

Regularly Presented papers at National Women's Science Congress & won best paper award. Had guest lectured, chaired/ judged many events. Her interview has come in FM Rainbow (All India Radio) under inspire program & had been called by TV for expert opinion. Her articles are published in various news papers/journals and magazines on different subjects. **Special Interest/ knowledge:** Memory/ concentration enhancing methods, Exam fears, Career guidance, Brain gym, Suicidal tendency, fears & phobias, Psycho somatic diseases (mind body connection), ADHD, LD, Autism, few physical and mental health issues, addictions, depression, brain chemical issues, etc.

**Refer-**Google Page–wswrt-noothan

Handwriting is the keyhole to our subconscious mind. We can discover our true personality; identify our strengths, weaknesses and also health issues through our subconscious communication – our handwriting which is aptly called as brain writing. The act of writing is the movement – a series of gestures involving rhythm, size, pace, speed, pressure, direction, etc. Handwriting itself captures and holds on paper the slightest motor pulse of the writer with many contributing factors which enter into it.

Handwriting traces disturbances in neuro-muscular coordination, and the way strokes flow out of writing instrument gives away a great deal about the health condition. The warnings can come through our handwriting much before our body starts exhibiting visible symptoms of a particular ailment. Our handwriting gives clue to our health conditions - Physical, Mental, Neurological, Psychological, Psychosomatic, Hormonal & growth issues. Here one can identify/ understand the root cause of any ailment and accordingly treatment can be given.

By changing our hand writing in a scientific way we can change our personality, thinking patterns and cure many ailments from the root and we can live a healthy life. Every day writing certain patterns, affirmations in a healthy handwriting can actually help us to lead a healthy life. This is called as graphotherapy. We are sending right signals to our brain to change the way it is been working by writing proper strokes. Graphotherapy combines the principles of neurology & psychology of handwriting analysis to create a powerful & effective method for changing our life. If persisted, our subconscious mind obliges and accepts the change for better.

Graphotherapy works like both pranayama (concentration) in yoga & acupressure therapy. When we hold the pen it presses our thumb where the acupressure point of brain, pituitary gland and pineal gland is situated. Studying with writing is always good as it activates our brain. In olden days also people used to write God's name crores of time or writing letters, songs, or other documents etc. If we observe such people, (like writers, poets) they were very healthy and lived for long time. For illiterate people drawing rangoli, knitting, making wick and turning beads of japmala/ tasbeeh/rosary helped in the same way.

Graphotherapy has provided promising responses in children with autistic challenges, ADS, ADHD, stammering, psycho-somatic diseases, addictions, phobias, trauma, blocks, fears & guilt. This therapy helps in identifying & curbing the suicide tendency. The research is supported by case studies and testimonials.

## SWASTIKA CONSULTANCY SERVICES - VISION STATEMENT RELEASED

A vision statement is a declaration of an organization's objectives, it is a company's road map, indicating what the company wants to become and guiding transformational initiatives by setting a defined direction for the company's growth. Now we are very happy to announce our vision statement. Which was released by Swastika Chairman P. Vishweswara Bhat and Sri Sathish Rao, Owner of Padma Complex, B.C. Road.

Vision Statement:

**" TO BE THE FOREMOST**

**SERVICE PROVIDER**

**WITH REQUISITE SOLUTIONS"**



## ಸ್ವಸ್ತಿಕಾ ಬಗ್ಗೆ ನಮ್ಮ ಅನಿಸಿಕೆಗಳು



ನನ್ನ ಕುಟುಂಬದ ಭೂಮಿಯ ದಾಖಲೆಗಳಲ್ಲಿ ಕೆಲವೊಂದು ಸಮಸ್ಯೆಗಳಿರುವುದನ್ನು ತಿಳಿದು ಇವುಗಳ ಪರಿಹಾರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸಿದರೂ ಪರಿಹಾರ ಕಂಡುಕೊಳ್ಳಲು ಆಗಲಿಲ್ಲ. ಈ ಸಮಸ್ಯೆಗಳನ್ನು ಸ್ವಸ್ತಿಕಾ ಕನ್ಸಲ್ಟೆನ್ಸಿ ಸಂಸ್ಥೆಯವರಲ್ಲಿ ತಿಳಿಸಿದಾಗ ನನ್ನಲ್ಲಿರುವ ಮತ್ತು ಕಛೇರಿಯಿಂದ ಕೆಲವೊಂದು ದಾಖಲೆಗಳನ್ನು ಪಡೆದುಕೊಂಡು ಪರಿಶೀಲಿಸಿ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಿ, ಕ್ಲಪ್ತ ಸಮಯದಲ್ಲಿ ದಾಖಲೆಗಳನ್ನು ಮಾಡಲು ಸಹಕರಿಸಿರುತ್ತಾರೆ. ಸ್ವಸ್ತಿಕಾ ಕನ್ಸಲ್ಟೆನ್ಸಿ ಸರ್ವಿಸಸ್‌ರವರಿಗೆ ನನ್ನ ವೈಯಕ್ತಿಕ ಅಭಿನಂದನೆಗಳು.

**– ವಿಶ್ವನಾಥ ಎಮ್.ಎಸ್. ಮೂಡಬಿದ್ರಿ**

### ಸ್ವಸ್ತಿಕಾ ಎನ್ನುವ ಮಂತ್ರದಂಡ

ನೀವು ಜಾದೂಗಾರನ ಕೈಯಲ್ಲಿ ಮಂತ್ರದಂಡ ನೋಡಿದ್ದೀರಲ್ಲ? ಬೀಸಣಿಗೆಯನ್ನು ಹೂವಿನ ಬೊಕ್ಕೆಯನ್ನಾಗಿಸುವ ಹೂವನ್ನು ಪಾರಿವಾಳವನ್ನಾಗಿಸಿ ಕ್ಷಣಾರ್ಧದಲ್ಲೆ ನಿಮ್ಮನ್ನು ಬೆಕ್ಕಸ ಬೆರಗುಗೊಳಿಸುವ ಮಂತ್ರದಂಡವದು. 'ಸ್ವಸ್ತಿಕ' ಎನ್ನುವುದೂ ಇಂತಹುದೇ ಮ್ಯಾಜಿಕಲ್ ಸ್ಟಿಕ್. ಇಬ್ಬರು ಡಿ.ಡಿ.ಎಲ್.ಆರ್, ಇಬ್ಬರು ಎ.ಡಿ.ಎಲ್.ಆರ್, ಇಬ್ಬರು ಸೂಪರ್‌ವೈಸರ್, ಒಂದು ಡಜನ್ ಸರ್ವೇಯರರು ಐದೂವರೆ ಸಂವತ್ಸರ ಪೂರ್ತಿ ಶ್ರಮಿಸಿಯೂ ಸಿಗದ ಫಲಿತಾಂಶವನ್ನು ಮಾರ್ಪಾಡಿಯ ಚಿನ್ನಯ್ಯಣ್ಣನಿಗೆ 'ಸ್ವಸ್ತಿಕ' ನೀಡಿದೆ. ಇಂತಹ ಶಿಸ್ತಿನ ಟೀಮ್‌ವರ್ಕ್ ಹೊಂದಿರುವ ಸಂಸ್ಥೆ ಸಮಾಜಕ್ಕೆ ಆಸ್ತಿ.

**– ರಾಜೇಂದ್ರ ಪೈ, ಮೂಡುಬಿದ್ರಿ**



It has been my pleasure on assigning "Swastika consultancy services" to avail my Trading license. You have provided your fullest even before the expected promise. I got a very good service and got what I asked for. Thank you.

**-Charanraj, Mangalore**

## ಸ್ವಸ್ತಿಕಾ ಸಂಸ್ಥೆ ನಡೆಸಿದ ತರಬೇತಿ ಶಿಬಿರದ ಚಿತ್ರಗಳು




ಸರಕಾರಿ ಪ್ರೌಢಶಾಲೆ ಪ್ರಾಂತ್ಯ, ಮೂಡಬಿದ್ರಿ



ಶ್ರೀ ಮಹಾವೀರ ಕಾಲೇಜು ಮೂಡಬಿದ್ರಿ



ಆದರ್ಶ (ರಿ.), ಮೂಡುಬಿದ್ರಿ
ನವಚೇತನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ




ಸರಕಾರಿ ಸಂಯುಕ್ತ ಪ್ರೌಢಶಾಲೆ, ನೀರ್ಕೆರೆ, ಮೂಡಬಿದ್ರಿ

## Land Survey Photos







## Our Corporate Clients

GEM Public School
ZED Associates
M/s Galaxy Sports World

Lotus Properties
Coastal Housing
M/s G.M.L Holdings & Properties

Soorya InfoTech
Hajaj Group
Shree Venkateshwara Sweets

Divya Roopa Construction
Ocean Pearl
Modern Rice Mill


## TEAM BUILDING TRAINING TO SENIOR MANAGEMENT STAFF'S OF OCEAN PEARL, MANGALORE







## The way to Reach us




## Two Days workshop on CHAIRMANSHIP AND PARLIAMENTARY PROCEDURES conducted at Mangaluru by International Trainer Palanivel & Aravind Rao







## ಡಿಜಿಟಲ್ ಸಹಿಯೊಂದಿಗೆ ಮಂಗಳೂರಿನ ಪ್ರಥಮ ಭೂಪರಿವರ್ತನಾ ಆದೇಶ ಪಡೆದ ಸಾಧನೆ

01–04–2018ರಿಂದ ಭೂ ಪರಿವರ್ತನೆ ಕಡತಗಳಲ್ಲಿ ಕಡ್ಡಾಯವಾಗಿ ಡಿಜಿಟಲ್ ಸಹಿಯ ಆದೇಶವನ್ನು Online ಮುಖಾಂತರ ಮಾಡುವ ಪ್ರಕ್ರಿಯೆಯನ್ನು ಕರ್ನಾಟಕ ಸರಕಾರ ಜಾರಿಗೆ ತಂದು ತಂತ್ರಾಂಶವನ್ನು ಅಳವಡಿಸಲಾಗಿದ್ದರೂ ತಂತ್ರಾಂಶದ ಅರಿವಿನ ಕೊರತೆಯಿಂದಾಗಿ, ಜಿಲ್ಲಾಧಿಕಾರಿಗಳ ಡಿಜಿಟಲ್ ಸಹಿ ಇರುವ ಭೂಪರಿವರ್ತನೆ ಆದೇಶವನ್ನು ಇತ್ತೀಚೆಗಿನವರೆಗೆ ಪಡೆದುಕೊಳ್ಳಲು ಸಾಧ್ಯವಾಗಿಲ್ಲ.

ಸ್ವಸ್ತಿಕಾ ಸಂಸ್ಥೆಯ ಕಕ್ಷಿದಾರರ ಭೂ ನ್ಯಾಯಮಂಡಳಿ ತೀರ್ಪಿನ/ಅದಿಭೋಗದ ಜಮೀನುಗಳ ಬಗ್ಗೆ ವಾಣಿಜ್ಯ ಉದ್ದೇಶಕ್ಕೆ ಭೂಪರಿವರ್ತನೆಗೆ ಪೂರಕ ದಾಖಲೆಗಳನ್ನು ಸಲ್ಲಿಸಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಡಿಜಿಟಲ್ ಸಹಿ ಹೊಂದಿರುವ ಮಂಗಳೂರಿನ ಪ್ರಥಮ ಭೂಪರಿವರ್ತನೆ ಆದೇಶವನ್ನು ಪಡೆದುಕೊಳ್ಳುವಲ್ಲಿ ಪ್ರಥಮ ಸಂಸ್ಥೆಯಾಗಿದೆ.

**Head Office :** Ist Floor, Lasrado Towers, Opp. Canara Bank, Ladyhill, Mangalore-06, D.K., Karnataka. Phone: 0824- 2455167

**Branch Offices :** Ground Floor, Padma Complex, B.C. Road - 574219, D.K., Karnataka. Phone: 08255-231167

Ist Floor, R.B. City Complex, Alva's Hospital Road, Opp. Axis Bank, Moodabidri - 574227 D.K., Karnataka. Phone: 08258-237167

Email: swastikacs2016@gmail.com Mob.: 9483326167